# ಸರಕಾರಿ ಉನ್ನತ ಪ್ರೌಢಶಾಲೆ

## ಪೈವಳಿಕೆ - ಕಾಯರ್ಕಟ್ಟೆ

## ಡಿಜಿಟಲ್ ಮ್ಯಾಗಜಿನ್

2019

LITTLE KITES PRESENTS

# ಕಲರವ–2



KALARAVA ….. the digital magazine

......ಮುನ್ನುಡಿ



ಮಕ್ಕಳು ತಯಾರಿಸುವ ಈ ಡಿಜಿಟಲ್ ಮಾಹಿತಿಯುಳ್ಳ ಮ್ಯಾಗಜಿನ್ ಶಾಲೆಯ ಕುರಿತಾದ ಸಮಗ್ರ ಮಾಹಿತಿಯನ್ನು ಪ್ರತಿಫಲಿಸುವುದರೊಂದಿಗೆ ಮಕ್ಕಳ ವೈಯಕ್ತಿಕ ಬರವಣಿಗೆಗೂ, ಬೆಳವಣಿಗೆಗೂ ಕಾರಣವಾಗಲೆಂದು ಹಾರೈಸುವೆನು. ಜತೆಯಲ್ಲಿ ಶಾಲೆಯ ಸಮಗ್ರ ಚಟುವಟಿಕೆಗಳ ಸಚಿತ್ರವರದಿಯು ಹೀಗೆ ಮುಂದುವರಿಯಲಿ.

~~~ ಪ್ರಧಾನ ಸಂಪಾದಕರು ಮತ್ತು ಮುಖ್ಯೋಪಾಧ್ಯಾಯರು
ಸರಕಾರಿ ಉನ್ನತ ಪ್ರೌಢಶಾಲೆ ಪೈವಳಿಕೆ

.......................................................................................

*.....ಶುಭಹಾರೈಕೆ1*



*ಜಗತ್ತುಬದಲಾಗುತ್ತಿರುವ ತಂತ್ರಜ್ಞಾನದೊಂದಿಗೆ ಬೆಳೆಯುತ್ತಿದೆ,ಬೆಳೆಯಬೇಕು. ಶಿಕ್ಷಣವು ನಿಂತ ನೀರಾಗದೆ ತೆರೆದ ಪುಸ್ತಕವಾಗಬೇಕು.ಮಕ್ಕಳು ಪುಸ್ತಗದಿಂದಾಚೆಗೆ ಆಸಕ್ತಗೊಂಡು ಕಲಿತಾಗ ಶಿಕ್ಷಣದ ಗುಣಾತ್ಮಕತೆ ಬೆಳವಣಿಗೆಯಾಗುವುದು. ಮಕ್ಕಳ ತಾತ್ರಿಕ ಪ್ರತಿಫಲನ ಕಲರವಕ್ಕೆ ಎಲ್ಲಾ ರೀತಿಯ ಶುಭವನ್ನು ಬಯಸುವೆನು.*

*~~~ ಶ್ರೀಮತಿ ರೀನಾ, ಹಿರಿಯ ಅಧ್ಯಾಪಿಕೆ*
*ಸರಕಾರಿ ಉನ್ನತ ಪ್ರೌಢಶಾಲೆ ಪೈವಳಿಕೆ*
~~~



*ನವೀನ ಶಿಕ್ಷಣ ರೀತಿಯು ಡಿಜಿಟಲೀಕರಣಗೊಳ್ಳುತ್ತಿರುವಾಗ ಮಕ್ಕಳ ಸೃಜನಾತ್ಮಕ ಬರವಣಿಗೆಗಳು ಅದೇ ರೂಪಕ್ಕೆ ಬದಲಾಗುತ್ತಿರುವುದು ಹೆಚ್ಚು ಸತೋಷಕರ. ಮಕ್ಕಳಿಗೀಗ ತಾಂತ್ರಿಕ ವೇದಿಕೆಯೊಂದು ಸಿದ್ಧವಾಗುತ್ತಿದೆ. ಇದರ ಋಣಾತ್ಮಕ ದಿಶೆಗಳ ಕುರಿತಾಗಿ ಸಂವೇದನಾಶೀಲರಾಗುವುದು ಕೂಡ ಅಗತ್ಯ ಎಂದು ನೆನಪಿಸುವುದರೊಂದಿಗೆ ಕಲರವಕ್ಕೆ ಶುಭವನ್ನು ಕೋರುತ್ತಿದ್ದೇನೆ.*

*~~ ಶ್ರೀಮತಿ ಉಷಾಕುಮಾರಿ, ಹಿರಿಯ ಅಧ್ಯಾಪಿಕೆ*

.....................................................................................................

## ಅಧ್ಯಾಪಕ ಸಂಪಾದಕಿಯ ಮಾತುಗಳು



ಜಗತ್ತು ವೇಗವಾಗಿ ಬದಲಾಗುತ್ತಿದೆ. ಬದಲಾಗುತ್ತಿರುವ ಜಗತ್ತಿನಲ್ಲಿ ನಾವು ಕುಬ್ಜರಾಗಿರಲು ಸಾಧ್ಯವಿಲ್ಲ. ಮಾನವ ಹಕ್ಕುಗಳು, ಮಕ್ಕಳ ಹಕ್ಕುಗಳು, ಮಾಹಿತಿಹಕ್ಕುಗಳನ್ನು ತಳಹಂತದವರೆಗೂ ನೀಡಬೇಕಾದ ಅಗತ್ಯ ಪ್ರಸ್ತುತ ಜಗತ್ತಿನಲ್ಲಿ ಅನಿವಾರ್ಯತೆಯಾಗುತ್ತಿದೆ. ಪ್ರಜಾಪ್ರಭುತ್ವ ಮಾದರಿಯ ಕಡೆಗೆ ಜಗತ್ತು ಬದಲಾಗುತ್ತಿರುವಾಗ ಅತೀದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಇವೆಲ್ಲವುಗಳನ್ನು ಸಮಾಜದ ಎಲ್ಲ ಪ್ರಜೆಗಳಿಗೂ ತಲುಪಿಸಬೇಕಾದುದು ಅಧ್ಯಾಪಕರ ಜವಾಬ್ದಾರಿಯಾಗುತ್ತಿದೆ. ಆದ್ದರಿಂದಲೇ ಮಕ್ಕಳಿಗೆ ಏನನ್ನು ಕೊಡಬೇಕಾಗಿದೆಯೋ ಅದನ್ನು ಕೊಡುವಲ್ಲಿ ಸರಕಾರದ ಇಂತಹ ಯೋಜನೆಗಳು ನೆರವಾಗುವುದು ಸಂತಸದಾಯಕವಾಗಿದೆ. ಲಿಟಲ್ ಕೈಟ್ ಇಂತಹ ಯೋಜನೆಗೆ ಕೈತಾಂಗಾಗುವುದು, ಅದರ ಭಾಗವಾಗಿ ತಯಾರಾಗುವ ಡಿಜಿಟಲ್ ಮ್ಯಾಗಜಿನ್ ಕಲರವ 2 ಪ್ರಶಂಸನೀಯ. ಲಿಟಲ್ ಕೈಟ್ಸ್ ನ ಜವಾಬ್ದಾರಿಯನ್ನು ವಹಿಸಿದ ಕೈಟ್ಸ್ ಕಾಸರಗೋಡು ಘಟಕದ ಇನ್‌ಚಾರ್ಜ್ ಶ್ರೀ ರಾಜೇಶ್ , ಮಾಸ್ಟರ್ ಟ್ರೈನರ್ ಶ್ರೀ ಇ. ಜಮಾಲ್ ಮ್ಯಾಗಜಿನ್‌ನ ಹಿನ್ನಲೆಯ ಪ್ರಚೋದಕರು. ಅವರಿಗೂ ವಂದನೆಗಳು, ಪ್ರಯತ್ನಿಸಿದ ಕೈಟ್ಸ್ ಮಕ್ಕಳಿಗೆ ಶುಭಾಶಯಗಳು..

... ಶ್ರೀಮತಿ ವಿಜಯಲಕ್ಷ್ಮಿ.ಕೆ Little Kite Mistress Ghss paivalike

**ಪ್ರೀತಿಯ ಓದುಗರೇ ,**



ಪ್ರಸ್ತುತ ಶೈಕ್ಷಣಿಕ ಅಧ್ಯಯನವು ಜ್ಞಾನ, ವಿಜ್ಞಾನ, ಕಂಪ್ಯೂಟರ್ ಆಧಾರಿತವಾಗಿದೆ. ಇದರೊಂದಿಗೆ ನಮ್ಮ ಕಾರ್ಯ ಚಟುವಟಿ ಕೆಗಳು ಮುಂದುವರಿಯುವುದು ಅಗತ್ಯವಾಗಿದೆ. ಇದರ ಮುಂದಾಲೋಚನೆಯಿಂದಲೇ ರಾಜ್ಯಸರಕಾರದ ಲಿಟಲ್ ಕೈಟ್ಸ್ ಎಂಬ ಮಕ್ಕಳ ತಂಡವು ಶಾಲೆಗಳಲ್ಲಿ ಕಾರ್ಯಪ್ರವೃತ್ತ ವಾಗಿರುವುದು ನಮಗೆಲ್ಲ ಸಂತೋಷದ ವಿಷಯವಾಗಿದೆ. ಇದರ ವಿವಿಧ ಚಟುವಟಿಕೆಗಳ ಭಾಗವಾಗಿದೆ ಇ ಮ್ಯಾಗಜಿನ್. ಲಿಟಲ್ ಕೈಟ್ಸ್ ತಂಡದ ಮಕ್ಕಳು ಮಾತ್ರವಲ್ಲದೆ ಶಾಲೆಯ ಬಹುತೇಕ ಮಕ್ಕಳು ಇದರಲ್ಲಿ ತಮ್ಮ ಡಿಜಿಟಲ್ ಮಾಹಿತಿಯನ್ನು ಧಾರೆಯೆರೆದಿರುವರು. ಅಧ್ಯಾಪಕರ ಸೂಕ್ತ ಮಾರ್ಗದರ್ಶನದಲ್ಲಿ ಇದು ತಯಾರಾಗಿದೆ. ಇದರಲ್ಲಿ ಒಳಗೊಂಡ ಶಾಲೆಯ ಪ್ರತಿಭೆ ಹಾಗೂ ಪ್ರತಿಫಲನಗಳ ಸಮ್ಮಿಳನಗಳು ಚೇತೋಹಾರಿಯಾಗಿ ಮಿನುಗುತ್ತಿದೆ.

*~ ವೇದಶ್ರೀ. 10 ಎ ವಿದ್ಯಾರ್ಥಿ ಸಂಪಾದಕಿ.*

..................................................................................................

**EditorialBoard:**

**Chief Editor : Venkataramana Nayak**

**Staff Editor: Vijayalakshmi, K**

**Student Editor: Vedashree. B XA**

**Members**

1. Sanjeeva. M SITC
2. Rajesh. P HST,
3. Bushra. UPSIT
4. Shravya, HST,
5. Harish Nayak. IXA
6. Rakshith. K IX A
7. Sharanya. IXA
8. Yashitha. IXA
9. Khadeejamma. IXB
10. Swarna Gowri IXB
11. Jamsheed. VIIIA
12. Divyashree VIIIB
13. Srijith.K XB
14. Adarsh. XA
15. Saniya. XB
16. Dhanyashree. XA

## ವಿಷಯಾನುಕ್ರಮಣಿಕೆ


| Sl.No | ವಿಷಯ | Page |
|---|---|---|
| ೧ | ಕವರ್ ಪೇಜ್ | |
| ೨ | ಮುನ್ನುಡಿ | 1 |
| ೩ | ಶುಭಹಾರೈಕೆ 1, 2 | 2,3 |
| ೪ | ಅಧ್ಯಾಪಕ ಸಂಪಾದಕರ ಮಾತು | 3 |
| ೫ | ವಿದ್ಯಾರ್ಥಿ ಸಂಪಾದಕರ ಮಾತು | 4 |
| ೬ | ವಿಷಯಾನುಕ್ರಮಣಿಕೆ | 4 |
| ೭ | ಕೈಟ್ಸ್ ಗೆ ಸಂಬಂಧಿಸಿದ ಚಿತ್ರಗಳು | 5,6,7 |
| ೮ | ಪ್ರಮುಖ ಶಾಲಾ ಸುದ್ದಿಗಳು | 8,9,10,11 |
| ೯ | ವಿದ್ಯಾರ್ಥಿಗಳ ಡಿಜಿಟಲ್ ಬರವಣಿಗೆಗಳು | 13 ರಿಂದ 44 ರವರೆಗೆ |
| ೧೦ | ಉಪಸಂಹಾರ | 44 |





5




ಕೈಟ್ಸ್ ಮಕ್ಕಳಿಂದ ಡಿಜಿಟಲ್ ಕ್ಯಾಮರಾ ತರಬೇತಿ





**LITTLE KITES NEW TEAM 2019-2022**




**LITTLE KITES LAST YEAR TEAM 2018-2021**




**SVVHSS Miyapadav ನಲ್ಲಿ ನಡೆದ ಉಪಜಿಲ್ಲಾಮಟ್ಟದ ಕ್ಯಾಂಪ್ ನಲ್ಲಿ ಭಾಗವಹಿಸಿದ KITE ವಿದ್ಯಾರ್ಥಿಗಳು**




## DIGITAL CAMARA TRAINING FOR FOR TEACHERS.....

## TRAIL AND ERROR







**ACHIVEMENTS IN SCIENCE FAIR 2019**











GHSS PAIVALIKE
ಕ್ಲಬ್‌ಗಳ ಉದ್ಘಾಟನೆ
REDUCE
ECO CLUB
RECYCLE
REUSE
Health
ಎಲ್ಲರಿಗೂ ಆದರದ ಸ್ವಾಗತ

# ಸುದ್ದಿಗಳು

**ನವಾಗತರ ಕಲರವ**

ಜೂನ್ 1 ನೇ ತಾರೀಖಿನಂದು ಶಾಲಾ ಪ್ರವೇಶೋತ್ಸವ ವನ್ನು ಆಚರಿಸಲಾಯಿತು. 5,6,8 ನೇ ತರಗತಿಗೆ ಸೇರ್ಪಡೆ ಗೊಂಡ ನವಾಗತರನ್ನು ಸಡಗರದಿಂದ ಸ್ವಾಗತಿಸಲಾಯಿತು. ಶಾಲಾ ರಕ್ಷಕ ಶಿಕ್ಷಕ ಸಂಘದ ಅದ್ಯಕ್ಷ ಶ್ರೀ ಪುರುಶೋತ್ತಮ ಬಾಯಿಕಟ್ಟೆ, ತರಗತಿ ಅದ್ಯಾಪಿಕೆ ಶ್ರೀಮತಿ ಮಾಲತಿ ನೇತೃತ್ವದಲ್ಲಿ ಕಾರ್ಯಕ್ರಮವು ನಡೆಯಿತು.






ಸಂಜೆ ನಡೆದ ಅಧಿಕೃತ ಕಾರ್ಯಕ್ರಮವನ್ನು ಪೈವಳಿಕೆ ಗ್ರಾಮ ಪಂಚಾಯತಿನ ಅಧ್ಯಕ್ಷೆ. ಶ್ರೀಮತಿ ಭಾರತಿ. ಜೆ. ಶೆಟ್ಟಿ ಉದ್ಘಾಟಿ ಸಿದರು. ಮುಖ್ಯ ಅತಿಥಿ ಪೈವಳಿಕೆ ಕೃಷಿ ಭವನದ ಸಂಯೋಜಕಿ ಹರಿತ ಸಹ ಅಧಿಕಾರಿಗಳಾದ ಪ್ರಜೀಶ್ ಮತ್ತುಉಷಾಕುಮಾರಿ ಉಪಸ್ಥಿತರಿದ್ದು ಮಕ್ಕಳಿಗೆ ಹೊಸ ಗಿಡಗಳನ್ನು ಮತ್ತು ತರಕಾರಿ ಬೀಜಗಳನ್ನು ವಿತರಿಸುವುದರೊಂದಿಗೆ ಹಸಿರು ಕೇರಳದ ಮಹ ತ್ವವನ್ನು ವಿವಿರಿಸಿ ದರು. ಮುಖ್ಯೋಪಾಧ್ಯಾಯ ಶ್ರೀ ವೆಂಕಟ ರಮಣನಾಯಕ್ ಸ್ವಾಗತಿಸಿದ ಕಾರ್ಯಕ್ರಮಕ್ಕೆ ನೌಕರ ವೃಂದ ಕಾರ್ಯದರ್ಶಿ ಶ್ರೀ ಧರ್ಮೇಂದ್ರ ಆಚಾರ್ಯ ಕೃತಜ್ಞತೆಯನ್ನು ಸಲ್ಲಿಸಿದರು.

**ವಾಚನಾದಿನಾಚರಣೆ :**

ಜೂನ್ 19 ಮಂಗಳವಾರ : 19/06/2019 ರಂದು ನಮ್ಮ ಶಾಲೆಯಲ್ಲಿ ವಾಚನಾವಾರದ ಉದ್ಘಾಟನೆ ಯು ನಡೆಯಿತು. ವಿಶಿಷ್ಟ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಶಾಲೆಯ ಹಳೆಯವಿದ್ಯಾ ರ್ಥಿನಿ, ಹತ್ತಿರದ ಶಾಲೆಯಾದ ಜಿ.ಎಲ್ .ಪಿ ಕಾಯರ್ ಕಟ್ಟೆಯ ನಿವೃತ್ತ ಮುಖ್ಯಶಿಕ್ಷಕಿಯಾದ ಶ್ರೀಮತಿ ಗೀತಾ.ಕೆ ಅವರು ಭಾಗವಹಿಸಿ ಓದುವ ಹವ್ಯಾಸದ ಮಹತ್ವ ವನ್ನು ವಿವರಿಸಿದರು. "ಓದು ಬೆಳಕಿನ ಕಡೆಗಿನ ದಾರಿ. ಪಿ.ಪಣಿಕ್ಕರ್ 20 ನೇ ಶತಮಾನದಲ್ಲಿ ಈ

ಸಾಧನೆಯನ್ನು ಮಾಡಿದರು.21 ನೇ ಶತಮಾನದಲ್ಲಿ ಇದನ್ನು ಅಭಿಯಾನವಾಗಿಸಿ, ಓದಿನ ಕ್ರಾಂತಿಯನ್ನು ಮಾಡಬೇಕಾದ್ದು ಇಂದಿನ ಮಕ್ಕಳ ಮಹತ್ತರ ಜವಾಬ್ದಾರಿಯಾಗಬೇಕು' ಎಂಬ ಹಿತವಚನ ನುಡಿದರು. ಅವರು ತಮ್ಮ ವಿದ್ಯಾರ್ಥಿ ಜೀವನದ ಕಾಲದ ಓದಿನ ಮಹತ್ವ ಮತ್ತು ಇದ್ದ ಪರಿಮಿತಿಗಳನ್ನು ವಿವರಿಸಿದರು. ವಿದ್ಯಾರ್ಥಿನಿಯರಾದ ಧನ್ಯಶ್ರೀ, ಫೌಸಿಯಾ,ಸಾನಿಯ ವಿವಿಧ ಭಾಷೆಗಳಲ್ಲಿ ಕವಿಪರಿಚಯವನ್ನು ಮಾಡಿದರು. ಹಿರಿಯ ಅಧ್ಯಾಪಕಿ ಉಷಾ ಓದಿನ ದಿನದ ಶುಭಾಶಯವನ್ನು ಹೇಳಿದರು. ಭಾಷಾ ಅಧ್ಯಾಪಕಿ ಶ್ರೀಮತಿ ಶ್ರಾವ್ಯ ಕಾರ್ಯಕ್ರಮ ವನ್ನು ನಿರೂಪಿಸಿದರು. ಈ ಸಂಬಂಧವಾಗಿ ಶಾಲೆಯ ಭಾಷಾ ಕ್ಲಬ್ಬಿನ ನೇತೃತ್ವದಲ್ಲಿ ವಿವಿಧ ಸ್ಪರ್ಧೆಗಳು, ಸಾಹಿತ್ಯಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು. ಸ್ಪರ್ಧಾವಿಜೇತರನ್ನು ಮುಖ್ಯೋಪಾಧ್ಯಾಯರು ಅಭಿನಂದಿಸಿದರು.



***ಶ್ರೀಮತಿ ಗೀತಾ ಟೀಚರ್ ವಾಚನಾ ದಿನಾಚರಣೆಯನ್ನು ಉದ್ಘಾಟಿಸಿದಾಗ...***




**ಲಿಟಲ್ ಕೈಟ್ಸ್ ಕಾರ್ನರ್:**

ಸಾರ್ವಜನಿಕ ಶಿಕ್ಷಣ ಸಂರಕ್ಷಣಾ ಯಜ್ಞದ ಭಾಗವಾಗಿ ಎಲ್ಲ ಶಾಲೆಗಳಲ್ಲಿ ಜಾರಿಗೊಳ್ಳುತ್ತಿರುವ ಹೈಟೆಕ್ ತರಗತಿ ಕೋಣೆಗಳ ಸೂಕ್ತ ಮತ್ತು ಸಮರ್ಥವಾದ ಬಳಕೆಗೆ ಕೈತಾಂಗಾಗುವ ಉದ್ದೇಶದಿಂದ ರೂಪು ಗೊಂಡ Little kites ನ ಮೊದಲ 20 ವಿದ್ಯಾರ್ಥಿಗಳನ್ನೊಳಗೊಂಡ *ಶಾಲಾ ಕೈಟ್ ತಂಡವು ಜೂನ್ 1 ರಂದು ಅಧಿಕೃತವಾಗಿ ಉದ್ಘಾಟನೆಗೊಂಡಿತು.*

*ಇವರಿಗೆ Hightech Management Basic Training ನ್ನು ಶಾಲಾ IT ವಿಭಾಗದಿಂದ ನೀಡಲಾಯಿತು. ಪ್ರತೀ ಬುಧವಾರ ಸಂಜೆ 4 ರಿಂದ 5 ರವರೆಗೆ ಇವರಿಗೆ ತಾಂತ್ರಿಕ ಪೂರಕ ಚಟುವಟಿಕೆಗಳ ಕುರಿತು ತರಬೇತಿಯನ್ನು ನೀಡಲಾಗುವುದು.ಇದಕ್ಕಾಗಿರುವ ಸಂಪನ್ಮೂಲ ತರಬೇತಿ ಯನ್ನು ಶಾಲಾ Little Kites Mistress ಶ್ರೀಮತಿ ವಿಜಯಲಕ್ಷ್ಮಿ GHSS Uppala ಶಾಲೆಯಲ್ಲಿ ಪಡೆದಿರುವರು. Little Kites ನ registered sign board ನ್ನು ಶಾಲಾ ಆವರಣದಲ್ಲಿ ಈಗಾಗಲೇ ಅಳವಡಿಸಿ ದ್ದು, LK ಯ ನೇತೃತ್ವದಲ್ಲಿ ಕನ್ನಡ ಟೈಪಿಂಗ್ ತರಬೇತಿಯು ಈಗ ನಡೆಯುತ್ತಿದೆ.*

.............................................


**ಅಂತಾರಾಷ್ಟ್ರೀಯ ಯೋಗ ದಿನ** :

‘‘ಪ್ರಕೃತಿ ಮತ್ತು ದೇಹಕ್ಕೆ ಅವಿನಾಭಾವ ಸಂಬಂಧವಿದೆ. ದೇಹಪ್ರಕೃತಿಗೆ ಅನುಗುಣವಾಗಿ ನಾವು ದೇಹವನ್ನು ದಂಡಿಸಬೇಕು. ಪ್ರತಿಯೊಂದು ಯೋಗವಿಧಕ್ಕೂ ನಿಶ್ಚಿತ ಉದ್ದೇಶವಿದೆ, ಅಪಾರ ಪ್ರಯೋಜನವಿದೆ. ಯೋಗ ಬಲ್ಲವನಿಗೆ ರೋಗವಿಲ್ಲ ಎನ್ನುವುದು ಗಾದೆ ಮಾತಲ್ಲ. ಅದು ವೈಜ್ಞಾನಿಕ ಸತ್ಯ"- ಕಾಯರ್ ಕಟ್ಟೆ ಶಾಲೆಯ ಕ್ರೀಡಾ ಅಧ್ಯಾಪಕ **ಶ್ರೀ ಮಹೇಶ್ ಭಟ್ ಕಜೆ.**



ಇವರು ಅಂತಾರಾಷ್ಟ್ರೀಯ ಯೋಗ ದಿನವನ್ನು, ಯೋಗ ಪ್ರಾತ್ಯಕ್ಷಿಕೆಯ ಮೂಲಕ ಶಾಲಾ ವಿದ್ಯಾರ್ಥಿಗಳಿಗೆ ಯೋಗ ತರಬೇತಿಯನ್ನು ನೀಡಿದರು. ಶಾಲೆಯ 100 ರಷ್ಟು ಮಕ್ಕಳು ಯೋಗ ತರಬೇತಿಯಲ್ಲಿ ಪಾಲ್ಗೊಂಡರು ಪ್ರತಿಯೊಂದು ಯೋಗ ವಿಧಗಳ ಮೊದಲು ಅದರ ಪ್ರಯೋಜನವನ್ನು ಮಕ್ಕಳಿಗೆ ತಿಳಿಸಿದರು. ಶ್ರೀಯುತರನ್ನು ಮುಖ್ಯೋಪಾಧ್ಯಾಯರು ಸ್ವಾಗತಿ ಸಿದರೆ, ಹಿರಿಯ ಅಧ್ಯಾಪಕಿ ರೀನ ವಂದಿಸಿ ದರು. ಸವಿವರವಾದ ಯೋಗ ಮಹತ್ವವನ್ನು ವಿವರಿಸುವ ಮೂಲಕ ಶ್ರೀ ಧರ್ಮೇಂದ್ರ ಆಚಾರ್ಯ ಕಾರ್ಯಕ್ರಮವನ್ನು ನಿರೂಪಿಸಿದರು.









(**ಚಿತ್ರಗಳು ಮೇಲಿನಿಂದ ಕೆಳಕ್ಕೆ ಕ್ರಮವಾಗಿ** : 1. **ಕದೀಜಮ್ಮ** 9 **ಬಿ,** 2. ಅಮಿತ 9 ಬಿ, 3. ಹರ್ಷಿತ. 9 ಬಿ, 4. )

**ನೀತಿ ಕತೆ:**

**ತೋಳ ಮತ್ತು ಮೊಲ** ~ (ಸಂಗ್ರಹ) ಯಶಿತ.9A

ಒಂದು ದಿನ ಹಸಿದ ತೋಳವು ತನ್ನ ಮುಂದೆ ಓಡಿಹೋಗುತ್ತಿರುವ ಮೊಲವನ್ನು ನೋಡಿತು. ಮೊಲವನ್ನು ಹಿಡಿದು ತಿನ್ನಬೇಕೆಂಬ ಆಸೆಯಿಂದ ತೋಳವೂ ಮೊಲದ ಹಿಂದೆ ಓಡಲಾರಂಭಿಸಿತು. ಇದನ್ನು ಕಂಡ ಮೊಲವು ಇನ್ನೂ ವೇಗದಿಂದ ಓಡಲಾರಂಭಿಸಿತು. ಎಷ್ಟು ದೂರ ಓಡಿದರೂ ತೋಳಕ್ಕೆ ಮೊಲವನ್ನು ಹಿಡಿಯಲಾಗಲಿಲ್ಲ. ಕೊನೆಗೆ ತೋಳಕ್ಕೆ ಸುಸ್ತಾಗಿ ಹೋಯಿತು. ಕೊಂಚ ದಣಿವಾರಿಕೊಳ್ಳಲು ಅದು ಒಂದು ಕಡೆ ನಿಂತುಬಿಟ್ಟಿತು. ಆ ಸಂದರ್ಭವನ್ನು ಉಪ ಯೋಗಿಸಿ ಮೊಲವು ಸುಲಭವಾಗಿ ತಪ್ಪಿಸಿಕೊಂಡಿತು. ಇವರ ಓಟ ವನ್ನು ಕಂಡ ಸಿಂಹವು ತೋಳವನ್ನು ಗೇಲಿಮಾಡಿತು. ಹಾ ! ಹಾ ! ಇಷ್ಟು ಶಕ್ತಿಯೂ ನಿನ್ನಲ್ಲಿಲ್ಲವೇ ? ನಿನ್ನಿಂದ ಒಂದು ಮೊಲವನ್ನು

ಹಿಡಿಯಲು ಆಗುತ್ತಿಲ್ಲವಲ್ಲ. ಅದಕ್ಕೆ ತೋಳ ಹೇಳಿತು, "ಗೆಳೆಯಾ, ನಾನು ನನ್ನ ಊಟಕ್ಕಾಗಿ ಓಡುತ್ತಿರುವೆ. ಆದರೆ ಆ ಮೊಲವು ತನ್ನ ಜೀವಕ್ಕಾಗಿ ಓಡುತ್ತಿದೆ".

**ನೀತಿ: ಜೀವಭಯವಿದ್ದಾಗ ಎಂಥವರಿಗೂ ಧೈರ್ಯ ಬರುವುದು.**

**ಅಜ್ಜನ ಕಥೆಗಳು**

ಒಂದಾನೊಂದು ಕಾಲದಲ್ಲಿ ಒಬ್ಬ ಅಜ್ಜನಿಗೆ ಮಗನೊಬ್ಬನಿದ್ದ. ಮಗನಿಗೆ ಮದುವೆಯಾಯಿತು. ಮದುಮಗಳು ಬಂದ ಕೆಲವೇ ತಿಂಗಳಲ್ಲಿ ಅಜ್ಜನನ್ನು ಮನೆಯಿಂದ ಹೊರಹಾಕಿದನು. ಬೇಸರದಿಂದ ಅಜ್ಜ ಮನೆಯಿಂದ ಹೊರಟನು. ಸ್ವಲ್ಪ ದೂರ ಹೋದಾಗ ಬಳ್ಳಿಮುಳಿಯಿಂದ ಕೂಡಿದ ಗುಡಿಸಲೊಂದನ್ನು ನೋಡಿದನು. ಗುಡಿಸಲಿಗೆ ಹೋದ ಅಜ್ಜ ಅಲ್ಲಿ ಚಾಪೆ ಹಾಕಿ ಮಲಗಿದನು. ಅದೊಂದು ಕಳ್ಳರ ನಿಗೂಢ ಕೇಂದ್ರವಾಗಿತ್ತು. ಮಧ್ಯರಾತ್ರಿಯಲ್ಲಿ ಕಳ್ಳರು ಚಿನ್ನ ಬೆಳ್ಳಿ ಹಣ ಇತ್ಯಾದಿ ಗಳನ್ನು ಮರದಡಿಯಲಿ ತಂದು ಅಡಗಿಸಿಡಲು ಪ್ರಾರಂಭಿಸಿದರು. ಇದೇ ಸಮಯದಲ್ಲಿ ಅಜ್ಜನಿಗೆ ಅಜ್ಜನ ತಲೆಯಿಂದ ಹೇನೊಂದು ಸಿಕ್ಕಿತು. ಅಜ್ಜ ಕೋಪದಿಂದ "ಓ ಮಗನೇ ಸಿಕ್ಕಿ ಬಿಟ್ಟೆದ್ಯಾ.." ಅಜ್ಜನ ಸ್ವರ ವನ್ನು ಕೇಳಿದ ಕಳ್ಳರು ಅಲ್ಲಿಂದ ಓಡಿದರು.

.......................................................................

**ಪ್ರಬಂಧ**

**ಬಾಲಕಾರ್ಮಿಕರು**

ಹಿಂದಿನ ಕಾಲದಲ್ಲಿ ಜನರು ಬೇರೆ ಬೇರೆ ಕಸುಬುಗಳನ್ನು ನಡೆಸುತ್ತಿದ್ದರು. ಜನಸಂಖ್ಯೆಯ ಹೆಚ್ಚಳದಿಂದಾಗಿ ಬಡತನವು ಹೆಚ್ಚಿ ದಾಗ ತಮ್ಮ ಜೊತೆಗೆ ತಮ್ಮ ಮಕ್ಕಳನ್ನು ಸಣ್ಣಸಣ್ಣ ಕೆಲಸಕ್ಕೆ ಕರೆದು ಕೊಂಡು ಹೋಗುತ್ತಿದ್ದರು. ಬಡ ಕುಟುಂಬದ ಮಕ್ಕಳು ಸ್ವಲ್ಪ ವಿದ್ಯೆ ಕಲಿತು ತಂದೆ ತಾಯಿಯರಿಗೆ ನೆರವಾಗುವ ಉದ್ದೇಶದಿಂದ ಚಿಕ್ಕ ಪುಟ್ಟ ಕೆಲಸಗಳಿಗೆ ನೆರವಾಗುತ್ತಾರೆ. ಶಾಲೆಯಲ್ಲಿ ದೊರಕುವ ಶಿಕ್ಷಣ ಇಂತಹ ಮಕ್ಕಳನ್ನು ಆಕರ್ಷಿಸುವುದಿಲ್ಲ. ಬಾಲ ಕಾರ್ಮಿಕರಾಗಿದ್ದು ಮುಂದೆ ಜೀವನದಲ್ಲಿ ಯಶಸ್ಸನ್ನು ಸಾಧಿಸಿದವರೂ ಇದ್ದಾರೆ. ರಾತ್ರಿ ಶಾಲೆಗಳಲ್ಲಿ ಓದಿ ತಮ್ಮ ಜೀವನವನ್ನು ರೂಪಿಸಿ ಕೊಂಡವರಿದ್ದಾರೆ. ಆದರೆ ತಮ್ಮ ಈ ಸ್ಥಿತಿಯಿಂದ ನಿರಾಶೆಗೊಂಡ ಕೆಲವರು ಸಣ್ಣಪುಟ್ಟ ಅಪರಾಧಗಳನ್ನು ಮಾಡುತ್ತಾರೆ. ಬಡ ಕುಟುಂಬದಲ್ಲಿ ಜನಿಸಿದ ಮಕ್ಕಳು ನಾಲ್ಕೈದು

ವರ್ಷವಾಗುತ್ತಿದ್ದ ಹಾಗೆ ಜೀವನ ಸಾಗಿಸಲು ಕೆಲಸ ಮಾಡುವ ಮೂಲಕ ಹಣ ಸಂಪಾದನೆಗೆ ಪ್ರಯತ್ನಿಸುವರು. ತಂದೆ ತಾಯಿಯರನ್ನು ಕಳೆದುಕೊಂಡ ಮಕ್ಕಳು ಒಡಹುಟ್ಟಿದವರ ಹೊಟ್ಟೆ ಹೊರೆಯಲು ಅನಿವಾರ್ಯವಾಗಿ ಕೆಲಸ ಮಾಡ ಬೇಕಾಗುತ್ತದೆ. ಹೀಗೆ ಬಾಲಕಾರ್ಮಿಕರ ಪರಂಪರೆಯು ಮುಂದುವರಿಯುತ್ತದೆ. ಕಾಲಕಳೆದಂತೆ ಕಾರ್ಖಾನೆಗಳು ಸೃಷ್ಟಿಯಾಗಿ ನಿರ್ದಿಷ್ಟ ಅವಧಿಯ ಕೆಲಸಕ್ಕೆ ಕೆಲಸಗಾರರನ್ನು ನೇಮಿಸಲು ಆರಂಭಿಸಿದ ಕಾರ್ಮಿಕ ಎಂಬ ವರ್ಗವೊಂದು ಸೃಷ್ಟಿಯಾಯಿತು. ಇವರಿಗೆ ಸಂವಿಧಾನಾತ್ಮಕವಾಗಿ ಸಿಗಬೇಕಾದ ಪೋಷಕಾಹಾರ, ಸಂರಕ್ಷಣೆ, ಶಿಕ್ಷಣ ಇತ್ಯಾದಿ ಗಳನ್ನು ಒದಗಿಸುವಲ್ಲಿ ಎಲ್ಲರೂ ಪ್ರಯತ್ನಿಸಬೇಕಾಗಿದೆ.

~ (ಸಂಗ್ರಹ) ಯಶಿತ 8A

........................................

**ಗಾದೆ ಮಾತುಗಳು**

1. ಕೈಕೆಸರಾದರೆ ಬಾಯಿಮೊಸರು
2. ದನ ಕಪ್ಪಾದರೆ ಹಾಲು ಕಪ್ಪೇ
3. ಊರಿಗೆ ಅರಸನಾದರೂ ತಾಯಿಗೆ ಮಗ
4. ದೂರದ ಬೆಟ್ಟ ನುಣ್ಣಗೆ
5. ಕುಂಬಳ ಕಾಯಿ ಕಳ್ಳ ಹೆಗಲು ಮುಟ್ಟಿ ನೋಡಿದನು
6. ಸಾಲವೇ ಶೂಲ
7. ಆಪತ್ತಿಗಾದವನೇ ನೆಂಟ
8. ಆಳಾಗಬಲ್ಲವನು ಅರಸನಾಗಬಲ್ಲ.
9. ಉಪ್ಪು ತಿಂದವನು ನೀರು ಕುಡಿಯಲೇಬೇಕು.
10. ಅತ್ತೆಗೊಂದು ಕಾಲ ಸೊಸೆಗೊಂದು ಕಾಲ

~ **ಸ್ವರ್ಣ ಗೌರಿ. 9 ಬಿ**

## *ಅಂತಾರಾಷ್ಟ್ರೀಯ ಸ್ತನ್ಯಪಾನ ದಿನಾಚರಣೆ:*

ಮಂಜೇಶ್ವರ ಐಸಿಡಿಎಸ್ ಪ್ರೋಜೆಕ್ಟ್ ಸೈಕೋ ಸೋಶಿಯಲ್ ಸರ್ವೀಸ್ ಮತ್ತು ಆರೋಗ್ಯ ಕೇರಳ ಪ್ರಾಯೋಜಕತ್ವದಲ್ಲಿ ನಮ್ಮ ಶಾಲೆಯ ನೇತೃತ್ವದಲ್ಲಿ ಅಂತಾರಾಷ್ಟ್ರೀಯ ಸ್ತನ್ಯಪಾನ ದಿನಾಚರಣೆಯನ್ನು ಆಚರಿಸಲಾಯಿತು. ದಿನಾಚರಣೆಯ ಮಹತ್ವವನ್ನು ತಿಳಿಸಲು ಎರಡು ಹಂತಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮೊದಲ ಹಂತವಾಗಿ ಶಾಲೆಯ ಎಲ್ಲ ವಿದ್ಯಾರ್ಥಿಗಳಿಗೆ ಈ ಕುರಿತಾದ ಮಾಹಿತಿಯನ್ನು ನೀಡಲಾಯಿ ತು. ಈ ಕುರಿತಾದ ಸಂಪನ್ಮೂಲ ವ್ಯಕ್ತಿಯಾಗಿ ಜೌಶಿಯಾ ಟೀಚರ್ ಕಾರ್ಯನಿರ್ವಹಿಸಿದರು. ಎರಡನೆಯ ಹಂತವಾಗಿ ಪೈವಳಿಕೆ ಮತ್ತು ಬಾಯಾರ್ ನಲ್ಲಿ ಫ್ಲಾಶ್ ಮೋಬ್ ಪ್ರದರ್ಶ ನವನ್ನು ನಡೆಸಲಾಯಿತು. ಪೈವಳಿಕೆಯಲ್ಲಿನ ಕಾರ್ಯಕ್ರಮದ ಉದ್ಘಾಟನೆಯನ್ನು ಪೈವಳಿಕೆ ಪಂಚಾಯತ್ ಸದಸ್ಯೆ ರಜಿಯಾ ರಜಾಕ್ ನಡೆಸಿದರು. ಎಸ್. ಎಂ. ಸಿ ಅಧ್ಯಕ್ಷ ಶ್ರೀ ಅಜೀಜ್ ಕಲಾಯಿ ಕಾರ್ಯಕ್ರಮದ ಸಂದೇಶವನ್ನು ಜನರಿಗೆ ತಿಳಿಸಿದರು.

**ಅಮ್ಮನ ಮಮತೆ**

ಬೆಳ್ಳಂ ಬೆಳಗ್ಗೆ ಏಳುವವಳು
ನಿತ್ಯದ ಕೆಲಸವ ಮುಗಿಸುವಳು
ಕಾಫಿಯ ಮಾಡಿ ಕುಡಿಸುವಳು
ತಿಂಡಿಯ ಮಾಡಿ ತಿನಿಸುವಳು

ಮಕ್ಕಳು ಜತೆಯಲಿ ಹೊರಡುತ್ತಾ
ಅಮ್ಮನ ಜತೆಯಲಿ ಸಾಗುತ್ತಾ
ಶಾಲೆಯ ಬಸ್ಸನು ಹತ್ತುತ್ತಾ
ನೆಲಕಡಲೆಯನು ತಿನ್ನುತ್ತಾ ಸಂಜೆಯು ಶಾಲೆ ಬಿಟ್ಟಿತ್ತು

ಬೇಗನೆ ಮನೆಯ ಮುಟ್ಟಿತ್ತು
ಅಮ್ಮನ ತಿಂಡಿಯು ರೆಡಿಯಿತ್ತು
ಮಕ್ಕಳ ಆಸೆಯು ತೀರಿತ್ತು

ಶಾಲೆಯ ಕೆಲಸವ ಮುಗಿಸುತ್ತಾ

ಅಮ್ಮನ ಜೋಗುಳ ಕೇಳುತ್ತಾ

ಮಕ್ಕಳು ನಿದ್ದೆಯ ಮಾಡುತ್ತಾ

ಅಮ್ಮನ ಜತೆಯಲಿ ಮಲಗುತ್ತಾ...

**- ಗಗನ 9 ಬಿ**

## ತ್ರಿವರ್ಣ ವಂದನೆ

" ಅಗಸ್ಟ್ 15, ಭಾರತವು ಶಾಂತಿಯನ್ನು ಪ್ರತಿನಿಧಿಸುವ ದೇಶ. ಭಾರತದ ಭವ್ಯ ಸಂಸ್ಕೃತಿ, ಪರಂಪರೆಯನ್ನು ನಾಶ ಮಾಡುವುದಕ್ಕಾಗಿ ಬ್ರಿಟೀಶರು ಪ್ರಯತ್ನಿಸಿದರು. ಆದರೆ ಅದು ಅಷ್ಟೇನು ಸುಲಭವಾಗಿರಲಿಲ್ಲ. ಆರಂಭದಲ್ಲಿ ವ್ಯಾಪಾರ, ಬಡ್ಡಿ ಇತ್ಯಾದಿಗಳಲ್ಲಿ ತೊಡಗಿದ ಬ್ರಿಟೀಶರು ಭಾರತದಲ್ಲೊಂದು ಭೂಮಿಯನ್ನು ವಶಪಡಿಸಲು ತೆಗೆದುಕೊಂಡ ಸಮಯ ಸುಮಾರು 157 ವರ್ಷ. ಇದು ಪ್ಲಾಸಿ ಕದನ.... 1857 ರ ಪ್ರಥಮ ಸ್ವಾತಂತ್ರ್ಯ ಹೋರಾಟದ ನಂತರ ನಾವು ನಿರಂತರವಾಗಿ ಬ್ರಿಟೀಷರಿಗೆ ಹೊಡೆತಗಳನ್ನು ನೀಡಲು ಆರಂಭಿಸಿದೆವು. 1947 ರ ಸ್ವಾತಂತ್ರ್ಯದವರೆಗೆ ನಮ್ಮದು ಶಾಂತಿ ಮತ್ತು ಕ್ರಾಂತಿ ಮಿಶ್ರಿತವಾದ ಸ್ವಾತಂತ್ರ್ಯ ಕ್ರಾಂತಿ. ಹಿಂದೂ ಮುಸಲ್ಮಾನರೆಂಬ ಬೇಧವಿಲ್ಲದೆ ಒಂದೇ ತಾಯಿಯ ಮಕ್ಕಳಂತೆ ಹೋರಾಡಿದ್ದು... ಇತಿಹಾಸ...." ಶಾಲಾ ಮಾಜಿ ಪ್ರಾಂಶುಪಾಲ ಶ್ರೀ ಕುಂಞಕೃಷ್ಣನ್ ರವರ ಧೀರ್ಘ ಭಾಷಣದ ತುಣುಕುಗಳಿವು.



73 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿಶೇಷವಾಗಿ ನಮ್ಮ ಶಾಲೆಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮವು ಪ್ರಾಂಶು ಪಾಲರ ಧ್ವಜಾರೋಹಣದೊಂದಿಗೆ ನಡೆಯಿತು. ಮುಖ್ಯೋಪಾಧ್ಯಾಯರು, ಹಿರಿಯ ಅಧ್ಯಾಪಿಕೆ ರೀನ, ಪಿಟಿಎ ಅಧ್ಯಕ್ಷ ಶ್ರೀ ಅಲಿ ಕಡಂಕೋಡಿ, ಶ್ರೀ ಅಜೀಜ್ ಕಲಾಯಿ ಸಹಕರಿಸಿದರು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಅತಿಥಿಗಳಿಂದ ಭಾಷಣ, ವಿದ್ಯಾರ್ಥಿಗಳಿಂದ ಸ್ವಾತಂತ್ರ್ಯ ನೃತ್ಯವೈಭವ, ಸಮೂಹಗಾನ, ಹಿಂದೀ ಭಾಷಣ ನಡೆಯಿತು. ವೇದಿಕೆಯಲ್ಲಿ ಕಾರ್ಯಕ್ರಮದ ಪೂರ್ವಭಾವಿಯಾಗಿ ನಡೆದ ಸ್ಪರ್ಧಾ ವಿಜೇತರನ್ನು ಪ್ರಶಸ್ತಿಗಳೊಂದಿಗೆ ಅಭಿನಂದಿಸಿದರು. ಕಾರ್ಯಕ್ರಮದ ಪ್ರಯುಕ್ತ ಎಲ್ಲ ವಿದ್ಯಾರ್ಥಿಗಳಿಗೆ ಸಿಹಿತಿಂಡಿಯನ್ನು ಹಂಚಲಾಯಿತು.

ಪ್ರಾಂಶುಪಾಲರಾದ ಕುಂಞಕೃಷ್ಣನ್, ಪೈವಳಿಕೆ ಪಂಚಾಯತ್ ಮಾಜಿ ಅಧ್ಯಕ್ಷ ಚಂದ್ರ ಮಾನಿಪ್ಪಾಡಿ, ಸುಭಾಶ್ ಫ್ರೆಂಡ್ ಸರ್ಕಲ್ ಕಾರ್ಯದರ್ಶಿ ಶ್ರೀ ಅಜಿತ್ ಪೂಜಾರಿ, ಕ್ಯಾರಿಯರ್ ಗೈಡೆನ್ಸ್ ರಜಾಕ್ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಪಿ.ಟಿ.ಎ ಅಧ್ಯಕ್ಷ ಪುರುಶೋತ್ತಮ ಬಾಯಿಕಟ್ಟೆ ವಹಿಸಿ ದರು. 9 ಮತ್ತು+2 ವಿದ್ಯಾರ್ಥಿಗಳು ಫ್ಲಾಷ್ ಮೋಬ್ ನಲ್ಲಿ ಭಾಗವಹಿಸಿದರು. ಇಡೀ ಕಾರ್ಯಕ್ರಮವನ್ನು ಶಾಲಾ ಕೌನ್ಸಿಲರ್ ಅನಿತಾ ಸಂಯೋಜಿಸಿದರು. ಹೊಸತನದ ಕಲ್ಪನೆ, ಸಾಮಾಜಿಕ ಸಂದೇಶವನ್ನು ಪರಿಣಾಮಕಾರಿಯಾಗಿ ಬಿಂಬಿಸುವಲ್ಲಿ ಸಫಲವಾದ ಕಾರ್ಯಕ್ರಮವು ಕೊನೆಯವರೆಗೂ ಪ್ರೇಕ್ಷಕರನ್ನು ಹಿಡಿದಿಡುವಲ್ಲಿ ಸಮರ್ಥವಾಯಿತು.

***ಹಿರೋಶಿಮಾ ನಾಗಸಾಕಿ ದಿನಾಚರಣೆ:***

“ಯುದ್ದ ಯಾವುದಕ್ಕೂ ಪರಿಹಾರವಲ್ಲ. ಯುದ್ದ ಯುದ್ದವನ್ನು ಮಾತ್ರ ಉಂಟುಮಾಡುವುದು. ಯುದ್ದ ಎಷ್ಟು ಭೀಕರವೆಂದು ಹಿಬಾಕುಷ್ ಗಳೇ ಸಾಕ್ಷಿ. ಸಾವಿರ ಸಾವಿರ ಸಡಾಕೋ ಕೊಕ್ಕರೆಗಳು ಕಾಗದದಿಂದಲ್ಲ. ಮಾನವ ಮನಸಿನೊಳಗಿಂದ ಹಾರಿಬರಬೇಕಾಗಿದೆ. ಇನ್ನೊಂದು ಯುದ್ದ ಬೇಡವೇ ಬೇಡ ಎನ್ನುವ ಜನಾಂಗದ ಸೃಷ್ಟಿಯೇ ಇಂತಹ ಕಾರ್ಯಕ್ರಮಗಳ ತಿರುಳು,ಹೂರಣ…”

ಕು| ಶರಣ್ಯಾ. ಡಿ.

ಯುದ್ದ ವಿರೋಧಿ ದಿನವಾದ ಹಿರೋಶಿಮಾ ಮತ್ತು ನಾಗಸಾಕಿ ದಿನವನ್ನು ಶಾಲಾ ಅಸೆಂಬ್ಲಿಯಲ್ಲಿ ಆಚರಿಸಲಾಯಿತು. ನಿಶಾದ್ ನ ಅಸೆಂಬ್ಲಿ ಕಮಾಂಡ್ ಗಳ ನಂತರ ಯುದ್ದವಿರೋಧಿ ದಿನದ ಕುರಿತಾದ ಭಾಷಣವನ್ನು 9 ಎ ತರಗತಿಯ ಶರಣ್ಯಾ ಸವಿವರವಾಗಿ ಓದಿದಳು. ಮುಖ್ಯೋಪಾಧ್ಯಾಯರು ಯುದ್ದವಿರೋಧಿ ಸಂದೇಶವನ್ನು ನೀಡಿದರು.

***ಶಾಲಾಪಾಠ***

*ಬನ್ನಿರಿ ಬನ್ನಿರಿ ಮಕ್ಕಳೆ ನಾವು*

*ಶಾಲೆಗೆ ಹೋಗೋಣ*

*ಪಾಠವ ಕೇಳುತ, ಆಟವ ಆಡುತ*

*ಊಟವ ಮಾಡೋಣ*

*ಶಾಲೆಗೆ ಹೋಗಿ ಓದಿ ಬರೆದು*

*ದೊಡ್ಡವರಾಗೋಣ*

*ದೊಡ್ಡವರಾಗಿ ಕೀರ್ತಿಯಪಡೆದು*

*ಹೆಸರನು ಗಳಿಸೋಣ*

*ಬನ್ನಿರಿ ಬನ್ನಿರಿ ಮಕ್ಕಳೆ ನಾವು ಶಾಲೆಗೆ ಹೋಗೋಣ*

*: ಸ್ವರ್ಣ ಗೌರಿ 9 ಬಿ*

***ರಕ್ಷಕ ಪರಿಚಯ:***

ಶ್ರೀ ರಾಧಾಕೃಷ್ಣ ಆಚಾರ್ಯ ಪರಾಜೆ ಇವರದ್ದು, ಸುಳ್ಯದ ಹತ್ತಿರದ ಪೆರಾಜೆಯಲ್ಲಿ ಜನಿಸಿದವರು. ವೃತ್ತಿಯಲ್ಲಿ ದರ್ಜಿಯಾಗಿರುವ ಇವರು ಪ್ರವೃತ್ತಿಯಲ್ಲಿ ಕಲಾಮಜಲುಗಳಲ್ಲಿ ಕೈಯಾಡಿಸಿದವರು. ಹಲವು ತುಳು ಕನ್ನಡ ನಾಟಕಗಳು, ಕನ್ನಡ ತುಳು ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. ಸಾಮಾಜಿಕ



ಸಂದೇಶಗಳನ್ನು ಸಾರುವ ಹಲವು ಹೃಸ್ವ ಚಿತ್ರಗಳು ಈಗಾಗಲೇ ನಮ್ಮೆಲ್ಲರಿಗೂ ಪರಿಚಿತ. ಆಧುನಿಕ ಯುವಕರು ದಾರಿ ತಪ್ಪುವ, ಜವಾಬ್ದಾರಿಯಿಂದ ಜಾರಿಕೊಳ್ಳುವ ಕಿರುಚಿತ್ರ TODAY ಈಗಾಗಲೇ ನೀವು IT Lab ನಲ್ಲಿ ನೋಡಿರುವಿರಲ್ಲಾ... ಇತ್ತೀಚೆಗೆ ಕನ್ನಡದ ಪ್ರಸ್ತುತ ಸಮಸ್ಯೆಯನ್ನು ಬಿಂಬಿಸುವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು,ಕೊಡುಗೆ ರಾಮಣ್ಣ ರೈ ಚಿತ್ರದಲ್ಲೂ ಇವರು ಪ್ರಮುಖ ಪಾತ್ರವೊಂದರಲ್ಲಿ ನಟಿಸಿರುವರು. ಇವರ ಇಬ್ಬರು ಮಕ್ಕಳು ಕೂಡ ಕನ್ನಡ ಶಾಲೆಯಲ್ಲಿಯೇ ಕಲಿಯುತ್ತಿದ್ದಾರೆ. ಅವರಲ್ಲಿ 9 ನೇ ತರಗತಿಯಲ್ಲಿ

ಕಲಿಯುತ್ತಿರುವ ಕು. ಯಶಿತಾ ಒಬ್ಬಳು. ಶ್ರೀಯುತರ ಅಭಿನಯ ಕಲಾಪ್ರೀತಿ, ಸಾಮಾಜಿಕ ಚಿಂತನೆಗಳು ಹೀಗೆಯೇ ಮುಂದುವರಿಯಲೆಂಬುದು ನಮ್ಮೆಲ್ಲರ ನಿರೀಕ್ಷೆ.

***ಸೂರ್ಯೋದಯ***

*ಮುಸುಕಿದ ಮುಬ್ಬದು ಸರಿದಿಹುದು*

*ಎಲ್ಲೆಡೆ ಬೆಳಕದು ಹರಿದಿಹುದು*

*ಚಂದ್ರನ ಸರದಿಯು ಮುಗಿದಿಹುದು*

*ಸೂರ್ಯನ ಕಾಂತಿಯು ಹೆಚ್ಚಿಹುದು*

*ಅಲಂಕಾರದಿ ಬಂದನು ಸೂರ್ಯನು*

*ಕೊಡುವ ಎಲ್ಲರಿಗೂ ಬೆಳಕೆಂದಿಹನು*

*ದಿನವು ಬಾನಲಿ ಮಿನುಗುತಲಿರುವನು*

ಎಲ್ಲರ ನಗುವಲು ತಾನಾಗಿಹನು.

~ವೇದಶ್ರೀ. ಬಿ. 10 ಎ

...................................................

***ವಿಶೇಷ ದಿನಗಳ ಕುರಿತು ನಿಮಗೇನು ಗೊತ್ತು ?***

ವಿಶ್ವ ಸೈನಿಕ ದಿನ .. january 15

ವಿಶ್ವ ವಿಜ್ಞಾನ ದಿನ .. february 28

ವಿಶ್ವ ದಂತ ದಿನ .. march 6

*ವಿಶ್ವ ಆಂಗ್ಲ ದಿನ .. march 1*

ವಿಶ್ವ ಮಹಿಳಾ ದಿನ .. march 8

ವಿಶ್ವ ಕಥೆ ಹೇಳುವ ದಿನ ದಿನ .. march 20

ವಿಶ್ವ ಅರಣ್ಯ ದಿನ .. march 21

ವಿಶ್ವ ಜಲ ದಿನ .. march 22

ವಿಶ್ವ ಆರೋಗ್ಯ ದಿನ .. april 7

ವಿಶ್ವ ಪರಿಸರ ದಿನ .. june 5

ವಿಶ್ವ ರಕ್ತದಾನ ದಿನ .. june 14

*ವಿಶ್ವ ಜನಸಂಖ್ಯೆ ದಿನ .. july 11*

ವಿಶ್ವ ಹಾವುಗಳ ದಿನ .. july 16

ವಿಶ್ವ ಆಹಾರ ದಿನ .. october 16

ವಿಶ್ವ ರೈತರ ದಿನ .. december 23

*ವಿಶ್ವ ವೈದ್ಯ ದಿನ .. july 1 ~(ಸಂಗ್ರಹ.. ಯಶಿತಾ 9 ಎ)*

**ನಗೆ ಹನಿ ವಂದನ ೮ಎ**

ಟೀಚರ್: ಯಾಕೋ ಗುಂಡ, ಮಾರ್ಕ್ಸ್ ಕಾರ್ಡಿನಲ್ಲಿರೋ ಮಾರ್ಕ್ಸ್ ಗಳನ್ನೆಲ್ಲ ತಿದ್ದಿದ್ದಿಯಲ್ಲಾ ?

ಗುಂಡ : ನೀವೆ ಹೇಳಿದ್ದೀರಲ್ಲಾ ಟೀಚರ್, ನಮ್ಮ ತಪ್ಪುಗಳನ್ನು ನಾವೇ ತಿದ್ದಿಕೊಳ್ಳಬೇಕೆಂದು..

.............................................

ಟೀಚರ್: ನೀವು ಚೆನ್ನಾಗಿ ಓದಿ ಈ ದೇಶಕ್ಕೆ ಒಳ್ಳೆಯ ಹೆಸರು ತರಬೇಕು.

ಗುಂಡ: ಯಾಕೆ ಟೀಚರ್ ನಮ್ಮದೇಶದ ಇಂಡಿಯಾ ಎನ್ನುವ ಹೆಸರು ಚೆನ್ನಾಗಿಲ್ಲವಾ ?

**ಮುಸ್ಸಂಜೆಯ ಸೊಬಗು ವಂದನ ಬಿ. 9 ಎ**

ಬನ್ನಿರಿ ಗೆಳೆಯರೆ ಸಂಜೆಯ ಸಮಯವ

ಕಳೆಯುವ ಕಡಲಲ್ಲಿ

ನೀರಲಿ ಆಡುತ ತೇಲುವ ತರೆಗಳ ಮದ್ಯದಿ ಆಡುತಲಿ

ಎಲ್ಲಿ ನೋಡಿದರು ನೀರೆ ನೀರು ಕಣ್ಣಿಗೆ ಕಾಣುತ್ತಿದೆ

ಆಕಡೆ ನೋಡಿರೆ ಕಣ್ಗಳು ಕಾಂಬವು ಅಸ್ತಮ ದೃಶ್ಯವನು

ಹೊತ್ತದು ಮುಳುಗುವ ಸಮಯದಲಿ ಏನದು ಬಲುಚೆಂದ

ಎಲ್ಲರು ಮನೆಕಡೆ ಸೇರುತಿರೆ ಕತ್ತಲಾಯಿತು ಪ್ರಕೃತಿಯಲಿ

...................... .....................

**ತಾಯಿ ದೇವತೆ ಧನ್ಯ ಶ್ರೀ. 9 ಎ**

ತಾಯಿ ಎಂದರೆ ಮಾತೆ

ತಾಯಿ ನಮಗೆ ದೇವತೆ

ಅವಳಿಗರ್ಪಿಸುವೆ ಈ ಕವಿತೆ

ತಾಯಿ ನುಡಿಯುವ ಒಂದೊಂದು ಮಾತು

ನನ್ನ ಪಾಲಿಗದು ದೊಡ್ಡ ಮುತ್ತು

ಇವಳೇ ನನ್ನ ಪಾಲಿನ ಸ್ವತ್ತು

ತಾಯಿ ಎಂದರೆ ಪ್ರೀತಿ

ನನ್ನ ತಾಯಿ ಅಪರಂಜಿ

ದೇವತೆಯೇ ನನ್ನ ತಾಯಿ

.........................................................

**ಬಡತನದ ಬರಹ** ...... ಹರ್ಷಿತಾ. ಎನ್ 9 ಎ

ಒಂದೂರಿನಲ್ಲಿ ರಾಮು ಎಂಬ ಹುಡುಗನಿದ್ದ. ಸಣ್ಣ ಗುಡಿಸಲಿನಲ್ಲಿ ತಾಯಿಯೊಂದಿಗೆ ವಾಸವಾಗಿದ್ದ ರಾಮು ಕಡು ಬಡವನಾಗಿದ್ದ. ಬಡವನಾದರೂ ಕಲಿಕೆಗೇನೂ ಬರವಿರಲಿಲ್ಲ. ಹತ್ತನೆಯ ತರಗತಿಯಲ್ಲಿ ಪಾಸಾಗಿ ಉತ್ತಮ ಉದ್ಯೋಗ ಪಡೆಯಬೇಕೆಂಬುದು ಅವನ ಆಗ್ರಹವಾಗಿತ್ತು. ಆದರೆ ಅವನ ಏಕೈಕ ಆಸರೆಯಾಗಿದ್ದ ತಾಯಿ ಹಾಸಿಗೆ ಹಿಡಿದಾಗ ಅವನಿಗೆ ದಿಕ್ಕೇ ತೋಚಲಿಲ್ಲ. ಪರೀಕ್ಷೆ ಹತ್ತಿರ ಬಂದಾಗ ತನಗೆ ಪರೀಕ್ಷೆಗಿಂತ ತಾಯಿಯ ಆರೈಕೆಯೇ ಮುಖ್ಯವೆಂದು ಅವನಿಗೆ ತೋರಿತು. ಅವನು ಶಾಲೆಗೆ ಗೈರು ಹಾಜರಾಗಿ ತಾಯಿಯ ಆರೈಕೆಯಲ್ಲಿ ತೊಡಗಿದನು. ಆದರೆ ತಾನೊಂದು ಬಗೆದರೆ ವಿಧಿ ಮತ್ತೊಂದು ಬಗೆಯುತ್ತದೆ ಎಂಬ ಗಾದೆಯ ಹಾಗೆ ಅವನ ತಾಯಿಯ ಆರೋಗ್ಯವು ದಿನದಿಂದ ದಿನಕ್ಕೆ ಕ್ಷೀಣಿಸುತ್ತಾ ಬಂದು ಕೊನೊಂದು ದಿನ ರಾಮುವನ್ನು ಒಂಟಿಯಾಗಿಸಿ ಅವನ ತಾಯಿ ಇಹಲೋಕ ತ್ಯಜಿಸಿದಳು. ಅತ್ತ ಪರೀಕ್ಷೆಯೂ ಕೈತಪ್ಪಿ ಹೋದ ರಾಮು, ಒಮ್ಮೆಗೆ ವಿಚಲಿತನಾದರೂ ನಂತರ ಸುಧಾರಿಸಿಕೊಂಡು, ಎರಡು ತಿಂಗಳ ರಜೆಯಲ್ಲಿ ಕೂಲಿ ಕೆಲಸವನ್ನು ಮಾಡಿದನು. ತಾನು ಗಳಿಸಿದ ಹಣದಿಂದ ತಾಯಿಗಾಗಿ ಮಾಡಿಟ್ಟ ಸಾಲವನ್ನು ತೀರಿಸಿದನು. ಉಳಿದ ಹಣದಿಂದ ಜೀವನ ನಡೆಸಲು ತೀರ್ಮಾನಿಸಿದನು. ಮುಂದಿನ ವರ್ಷ ಮತ್ತೆ ಪರೀಕ್ಷೆಯನ್ನು ಬರೆದು ಉನ್ನತ ಶ್ರೇಣಿಯಲ್ಲಿ ಪಾಸಾದನು. ಅವನ ಆಸೆಯಂತೆ ಉತ್ತಮ ಉದ್ಯೋಗವೂ ಅವನಿಗೆ ಸಿಕ್ಕಿತು.

............................................................... ***ನಮ್ಮಲ್ಲಿಯ ದೋಷಗಳು***

*1. ಅವಶ್ಯಕತೆಗೆ ತಕ್ಕ ವೈಜ್ಞಾನಿಕ ಬಳಕೆ ನಮ್ಮಲ್ಲಿಲ್ಲ.*

*2.ಅಲಕ್ಷತನ ನಮ್ಮನ್ನು ಪರಿಪೂರ್ಣ ಆವರಿಸಿದೆ.*

*3.ಅಜ್ಞಾನ ಮೂಢನಂಬಿಕೆ, ಸಾಮಾಜಿಕ ಪರಿಸರಗಳ ಸಂಕೋಲೆಯಲ್ಲಿಸಿಲುಕಿ ನರಳುವದು ನಮ್ಮ ಮುಖ್ಯ ದೋಷ.*

*4. ದುಡಿದು ತಿನ್ನುವ ಭಾವನೆಯಿಲ್ಲ.*

*5. ಅಜ್ಞಾನಿ ರಾಜಕಾರಣಿಗಳ ಹಸ್ತಕ್ಷೇಪ.*

6. ಒಗ್ಗಟ್ಟಿಲ್ಲದೆ ಮುನ್ನಡೆಯುವಿಕೆ.

7. ಪರಿಶ್ರಮ ಇಲ್ಲದೆ ಫಲ ಬಯಸುವಿಕೆಯು ನಮ್ಮ ಭಾರತೀಯರ ಠಕ್ಕರ ಗುಂಪಿನ ಪ್ರಯತ್ನವಾಗಿದೆ. ಆದೂ ಕೂಡ ಮುಖ್ಯ ದೋಷ.

.......................................................

ಒಗಟುಗಳು

೧ . ಊರಿಗೆಲ್ಲ ಒಂದೇ ದೀಪ

=ಸೂರ್ಯ

೨. ಕಡ್ಡಿ ಹುಡುಗನಿಗೆ ತಲೆ ಮೇಲೆ ಕಪ್ಪು ಟೋಪಿ

=ಬೆಂಕಿ ಕಡ್ಡಿ

೩. ಸುಟ್ಟಮೋರೆ ಅಜ್ಜಿ ಎಣ್ಣೆ ಸವರಿಕೊಂಡು ಬೆಂಕಿ ಕಾಯ್ತಾಳೆ

=ದೋಸೆ ಕಾವಲಿ

೪ . ಅಜ್ಜಿ ಯ ಮೈತುಂಬಾ ಕಜ್ಜಿ

= ಹಾಗಲ ಕಾಯಿ

೫ . ಉದ್ದ ಮರದಲ್ಲಿ ಕೆಂಪು ಸನ್ಯಾ ಸಿ

= ಅಡಿಕೆ

೬ . ಅಡ್ಡ ಮರದಲ್ಲಿ ಬೊಡ್ಡ ಕುಳಿತಿದ್ದಾನೆ

= ಹಲಸಿನ ಕಾಯಿ

೭. ಕೆಸರಲ್ಲಿ ಹುಟ್ಟೋದು , ಸೇರೋದು ಗರ್ಭಗುಡಿ

= ತಾವರೆ

...........................................................

ಒಗಟುಗಳು

1. ಹಸಿರು ಗಿಡದಲ್ಲಿ ಮೊಸರು ಚೆಲ್ಲಿದೆ=ಮಲ್ಲಿಗೆ
2. ಅಡ್ಡ ಮರದಲ್ಲಿ ಬೊಡ್ಡ ಕುಳಿತಿದ್ದನೆ=ಹಲಸಿನ ಕಾಯಿ
3. ಸಾವಿರ ಮಕ್ಕಳಿಗೆ ಸಾಕು ಒಂದೇ ಉಡದಾರ=ಹಿಡಿಸೂಡಿ
4. ಕೆಂಪು ಕುಪ್ಪಿಯಲ್ಲಿ ಗಿಜಿ ಗಿಜಿ ಕಾಯಿ=ಮೆಣಸು
5. ಉದ್ದ ಮರದಲ್ಲಿ ಕೆಂಪು ಸನ್ಯಾಸಿ=ಅಡಿಕೆ

## ಮಾನವೀಯತೆ

ದಯೆ ಕರುಣೆ ಪರೋಪಕಾರ ಇವು ಮನುಷ್ಯ ಸ್ವಭಾವದಲ್ಲಿ ಅಡಕವಾಗಿರುತ್ತವೆ. ಕೆಲವೊಂದು ಸಲ ಈ ಗುಣಗಳು ನಿರ್ವೀರ್ಯವಾಗಬಹುದು. ಉಳಿದ ಗುಣಗಳ ಪ್ರಭಾವದಿಂದ ಕುಗ್ಗಿರಬಹುದು. ಮನುಷ್ಯನ ಮನಸಿನಲ್ಲಿ ಒಳಿತು ಕೆಡುಕುಗಳ ಮೆಲಾಟ ನಿರಂತರ ಸಾಗಿಯೇ ಇರುತ್ತದೆ. ಕೆಲವೊಂದು ಸಮಯ ಕೆಡುಕಿನ ಪ್ರವೃತ್ತಿ ಪ್ರಬಲವಾಗಿ ಮನುಷ್ಯನಲ್ಲಿ ಕಂಡುಬರುವುದು ಕೆಲವೊಂದು ಕಾಲ ಕೆಲವೊಂದು ದೇಶಗಳಲ್ಲಿ ಮನುಷ್ಯನ ನೈತಿಕ ಮಟ್ಟ ಅತಿ ಕಳಮಟ್ಟಕ್ಕೆ ಹೋಗುವುದುಂಟು. ಪ್ರಪಂಚದ ನೈತಿಕ ನೆಲೆಯಲ್ಲಿ ಏರಿಳಿತಗಳಾಗುವುದು ಸಹಜ. ಆದರೆ ಸದ್ಗುಣ ಪ್ರೇಮ, ನೀತಿಯ ಬಗ್ಗೆ ಗೌರವ _ ಇವು ಮನುಷ್ಯನ ಅಂತರಾಳದಲ್ಲಿ ಮೂಲತಃ ಇದ್ದೇ ಇರುತ್ತವೆ. ಕೆಲವು ಸಲ ಅವು ಹುದುಗಿರಬಹುದು. ವಾತಾವರಣದ ಶೃಂಖಲೆಯಲ್ಲಿ ನಿರ್ವೀರ್ಯವಾಗಿರಲಾರನು. ಯಾವ ಮನುಷ್ಯನೂ ಮೂಲತಃ ದುರ್ಗುಣಿ ಅಥವಾ ಕಠೋನಾಗಿರಲಾರನು ರವಿಂದ್ರನಾಥ ಠಾಕೂರರು ಒಂದೆಡೆ ಹೇಳಿದಂತೆ ವ್ಯಕ್ತಿಗಳು ಕ್ರೂರರಾಗಿರಬಹುದು. ಆದರೆ ಮಾನವ ಮಾತ್ರ ಕರುಣಾಮಯಿ ಈ ಸುಪ್ತಸದ್ಗುಣ ಹಾಗೂ ಸದ್ಗುಣಪ್ರೇಮ ಇವುಗಳನ್ನು ಚೇತರಿಸಲು ಸದಾ ಪ್ರಯತ್ನಿಸಬೇಕು.

ಅನೇಕ ಬಾರಿ ಹಲವರು ನಮ್ಮಲ್ಲಿಯ ನೈತಿಕಮಟ್ಟ ಇಂದು ಬಹಳ ಕೆಲಮಟ್ಟಕ್ಕೆ ಇಳಿದಿದೆ ಎಂದು ಉದ್ಗಾರ ತೆಗೆಯುವುದುಂಟು. ಅದು ಕೆಲಮಟ್ಟಿಗೆ ನಿಜವೂ ಹೌದು. ಆದರ ಅದಕ್ಕೆ ಕಾರಣಗಳಿಲ್ಲದೆ ಇಲ್ಲ ಇಂಥ ಕಾರಣಗಳಲ್ಲಿ ಮುಖ್ಯವಾಗಿ ನಮ್ಮ ಮೌಲ್ಯಗಳಲ್ಲಿಯ ಬದಲಾವಣೆ ಒಂದಾಗಿದೆ. ಈ ಬದಲಾವಣೆ ಕಾಲಾಂತರದಿಂದ ನಡೆದೇ ಇದೆ. ಇದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಯಾವುದೇ ದೇಶದಲ್ಲಿ ಒಂದು ಕಾಲದಲ್ಲಿ ಸದ್ಗುಣಿಗೆ ಗೌರವ ಸಲ್ಲುತ್ತಿದ್ದರೆ ಮತ್ತೊಂದು ಕಾಲದಲ್ಲಿ ಯೋಧನಿಗೆ, ಇನ್ನೊಂದು ಕಾಲದಲ್ಲಿ ಮೇಧಾವಿಗೆ, ಮಗದೊಂದು ಕಾಲದಲ್ಲಿ ಶ್ರೀಮಂತನಿಗೆ ಗೌರವ ಸಲ್ಲುತ್ತದೆ. ಈಗಿನ ಕಾಲದಲ್ಲಿ ಮನುಷ್ಯನ ಗೌರವವನ್ನು ಆತನ ಬ್ಯಾಂಕಿನಲ್ಲಿನ ಹಣ ಅವನು ವಾಸಿಸುವ ಮನೆ, ಅವನು ಓಡಾಡುವ ಮೋಟಾರು, ಇವುಗಳ ಮೇಲೆ ನಿರ್ಣಯಿಸುವ ಪ್ರವೃತ್ತಿ ಕಂಡುಬರುದೆ. ಇದರಿಂದ ಸದ್ಗುಣಿಗಳು ಸಂಪೂರ್ಣವಾಗಿ ನಾಶವಾಗದಿದ್ದರೂ ಕಮರುವುದುಂಟು. ಸಾಮಾನ್ಯ ಮನುಷ್ಯನು ಈ ಭೌತಿಕಸಾಧನಗಳೇ

ಸುಖವನ್ನು ತರಬಲ್ಲವೆಂದು ನಂಬಿ, ಅವುಗಳಿಗಾಗಿ ಹಾತೊರೆದು ಕೊನೆಗೆಲ್ಲವನ್ನೂ ಕಳೆದುಕೊಳ್ಳುತ್ತಿದ್ದಾನೆ. ಅವುಗಳಿಂದ ಸುಖವುಂಟಾಗಲಾರದೆಂದು ಮನವರಿತು ನಿರಾಶನಾಗುತ್ತಾನೆ. ಹೀಗೆ ಸದ್ಗುಣಗಳಿಗೆ ಶ್ಲಾಘನೆಯಿಲ್ಲದ ಜಗತ್ತಿನಲ್ಲಿ ಮನುಷ್ಯ ತನ್ನಲ್ಲಿದ್ದ ಮಾನವತೆಯನ್ನು ಕಳೆದುಕೊಳ್ಳುತ್ತಾನೆ. ಇಂಥ ಜಗತ್ತಿನಲ್ಲಿ ಅತೃಪ್ತಿ, ಅಶಾಂತಿ ಹೆಚ್ಚುವುದು ಸಹಜ. ಜಗತ್ತಿನಲ್ಲಿ ಬಹುಕಾಲದವರೆಗೆ ಅನೇಕ ದೇಶಗಳಲ್ಲಿ ಧರ್ಮ ಹಾಗೂ ನೀತಿ ಇವು ಒಂದಕ್ಕೊಂದು ಹೊಂದಿಕೊಂಡಿದ್ದವು. ನೈತಿಕ ತತ್ವಗಳೇ ಧರ್ಮದ ಚೌಕಟ್ಟಿನಲ್ಲಿ ಕಾಣಿಸಿಕೊಳ್ಳುತ್ತಿದ್ದವು ಮನುಷ್ಯನ ನೀತಿ ಸದ್ಗುಣಗಳನ್ನು ದೇವರ ಹೆದರಿಕೆಯೆಂಬ ಪೋಲಿಸ ಪಡೆಯಿಂದ ಸಂರಕ್ಷಣೆ ಮಾಡುವ ಸಾಹಸ ಕೆಲವು ಕಾಲ ನಡೆಯಿತು. ಸದ್ಗುಣಗಳಿಗೆ ಸದ್ಗುಣಗಳೆಂಬ ಗೌರವವಿರಲಿಲ್ಲ. ಎಲ್ಲಿಯವರೆಗೆ ಧಾರ್ಮಿಕ ಶ್ರದ್ಧೆ ಮನುಷ್ಯನಲ್ಲಿ ಅಚಲವಾಗಿದ್ದಿತೋ ಅಲ್ಲಿಯವರೆಗೆ ಧರ್ಮದ ಹೆದರಿಕೆಯಲ್ಲಿ ನೀತಿಯು ಬದುಕಿತ್ತು. ಆದರೆ ಭೌತಿಕಶಾಸ್ತ್ರಗಳು ಪ್ರಸಾರವಾದಂತೆ ನಮ್ಮ ಅನೇಕ ಧೈರ್ಮಿಕ ವಿಚಾರಗಳ ಬಗ್ಗೆ ನಮಲ್ಲಿ ಶ್ರದ್ಧೆ ಕಡಿಮೆಯಾಗತೊಡಗಿತು.

ಬೆಡಗಿನ ಒಗಟುಗಳು

1. ಕೆಂದ ಎತ್ತಿಗೆ ನೂರಾರು ಬಾಯಿ

= ಹುತ್ತ

2. ನೆಟ್ಟರೆ ಹುಟ್ಟೋದಿಲ್ಲ, ಕಿತ್ತರೆ ಬಾಡೋದಿಲ್ಲ, ಏನು ?

= ಕೂದಲು

3. ನೀಲಿಕೆರಿ ಅದರ ತುಂಬಾ ಬಿಳಿ ಹುವ್ವಾ

= ನಕ್ಷತ್ರಗಳು

4. ಗುದ್ದಿದರೆ ಗೂದಿ ಹೊರಬಿತ್ತು

= ಈರುಳ್ಳಿ

5 ಅಪ್ಪನ ಹಾಸಿಗೆ ಹಾಸಲರೆ, ಅವ್ವನ ಕಡಬು ಎಣಿಸಲಾರೆ.

= ಆಕಾಶ, ನಕ್ಷತ್ರ

6. ನೀಲಿಕೆರಿ ಅದರ ತುಂಬಾ ಬಿಳಿ ಹೂವ್ವಾ

=ನಕ್ಷತ್ರ

7. ರೆಕ್ಕೆ ಇಲ್ಲ, ಎಲ್ಲೆಂದರಲ್ಲಿ ಹಾರಾಡುತ್ತೆ

=ಮನಸ್ಸು

8. ಆಹಾ ಬಿಂಕದ ಸಿಂಗಾರಿ, ನಿನ್ನ ಮೈಯೆಲ್ಲಾ ಉರಿ

=ಮೆಣಸಿನಕಾಯಿ

9. ಜೋತಾಡೊ ಹಾವನ್ನ, ಜಂ ಅಂತ ತಿಂತಾರ

=ಪಡುವಲ ಕಾಯಿ

10.ಉದ್ದಾನಾಕಿಗೆ ಮೈತುಂಬಾ ಗಂಟೂ

=ಈಚಲು ಮರ

***ಗಾದೆ ಮಾತುಗಳು***

ಕೈ ಕೆಸರಾದರೆ ಬಾಯಿ ಮೊಸರು

ಒಗ್ಗಟ್ಟಿನಲ್ಲಿ ಬಲವಿದೆ

ದನ ಕಪ್ಪಾದರೆ ಹಾಲು ಕಪ್ಪೇ

ದುಡ್ಡೇ ದೊಡ್ಡಪ್ಪ

ಅತ್ತೆಗೊಂದು ಕಾಲ ಸೊಸೆಗೊಂದು ಕಾಲ

ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ

ದೇಶಸೇವೆಯೇ ಈಶ ಸೇವೆ.

ಹಸಿರೇ ಉಸಿರು

ಕೂತು ಉಣ್ಣುವವರಿಗೆ ಕುಡಿಕೆ ಹೊನ್ನೂ ಸಾಲದು

ಮಂಗನ ಕೈಯಲ್ಲಿ ಮಾಣಿಕ್ಯ

ಮರ ಒಂದು ವರ ಃ ವಂದನಾ 9 ಎ

***ಭಾಷೆ ಮತ್ತು ದೇಶದ ಗಾದೆಗಳು***

ವಿವೇಕವಿಲ್ಲದ ಅದೃಷ್ಟ ತೂತಾದ ಚೀಲದಂತೆ .... ರಷ್ಯ

ಹೃದಯದಿಂದ ಬಾರದ್ದು ಹೃದಯವನ್ನು ಮುಟ್ಟದು .... ರಷ್ಯ

ದೇವರಿಗೆ ಒಂದು ದೀಪ ಹಚ್ಚು.. ದೈವಕ್ಕೆ ಎರಡು .......ರಷ್ಯ

ತಗ್ಗಿ ನಡೆವವನಿಗೆ ತೊಂದರೆಯಿಲ್ಲ .... ಭಾರತದ ಗಾದೆ

ಒಳ್ಳೆಯ ಶತ್ರು ಕೆಟ್ಟ ಸ್ನೇಹಿತನಿಗಿಂತ ಉತ್ತಮ ..... ಯಹೂದಿ

ಆಹಾರಕ್ಕೆ ಉಪ್ಪಿದ್ದಂತೆ ಸಂಭಾಷಣೆಗೆ ಗಾದೆ ...ಅರೇಬಿಯಾ

ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ... ಭಾರತ

ಹಸುವಿನಿಂದ ಬರುವುದೆಲ್ಲವೂ ಬೆಣ್ಣೆಯಲ್ಲ ..... ಇಟಲಿ

ಹಣ ಹಣವನ್ನು ಹುಡುಕಿಕೊಂಡು ಹೋಗುತ್ತದೆ .....ರಷ್ಯನ್

ಹಣವಿಲ್ಲದ ಆರೋಗ್ಯ ಅರ್ಧ ಆರೋಗ್ಯವೇ ... ಇಟಲಿ

ಊರಿಗೆ ಅರಸನಾದರೂ ತಾಯಿಗೆ ಮಗ .... ಭಾರತದ ಗಾದೆ *~ ಸಂಗ್ರಹ... ಯಶಿತ 9 ಎ*

## ಎರಡು ಇರುವೆಗಳು

ಕಪ್ಪೆಯೊಂದು ಕುಪ್ಪಳಿಸುತ್ತ ಡಾಮರು ರಸ್ತೆಯನ್ನು ದಾಟುತ್ತಿ ದ್ದಾಗ ಅಕಸ್ಮಾತ್ ಬಂದ ಲಾರಿಯ ಚಕ್ರಕ್ಕೆ ಸಿಕ್ಕಿ ಅಪ್ಪಚ್ಚಿಯಾಯಿತು. ಸ್ವಲ್ಪ ಹೊತ್ತಿನ ನಂತರ ಅದೇ ದಾರಿಯಾಗಿ ಎರಡು ಇರುವೆಗಳು ಬಂದವು. ಕಪ್ಪೆಯ ದೇಹವನ್ನು ನೋಡಿದ ಇರುವೆಗಳಿಗೆ ಬಾಯಲ್ಲಿ ನೀರೂರಿತು. "ನೋಡುಗೆಳೆಯಾ ನಮಗಿಂದು ಭರ್ಜರಿ ಊಟಮಾಡಬಹುದು. ಬಾ " ಎಂದು ಮೊದಲನೆ ಇರುವೆಯು ಕಪ್ಪೆಯ ಮಾಂಸಕ್ಕೆ ಬಾಯಿಹಾಕಿತು. "ಅಯ್ಯೋ ಅಲ್ಲೇ ಬಿಡು... ನೋಡು ಅದರ ಮಾಂಸದಿಂದ ರಕ್ತ ಜಿನುಗು ತ್ತಿದೆ. ಅಂದರೆ ಈ ಕಪ್ಪೆ ಈಗಷ್ಟೇ ಸತ್ತಿದೆ ಇಲ್ಲೇನೋ ಉಪಾ ಯವಿದೆ ಕಣೋ" ಎಂದಿತು ಎರಡನೆ ಇರುವೆ. "ಏಯ್ ಹೋಗೋ ನೀನೊಂದು ಸಿಕ್ಕ ಆಹಾರವನ್ನು ತಿನ್ನುವುದು ಬಿಟ್ಟು ಉಪಾಯ ಗಿಪಾಯ ಅಂತ ಹೆದರಿಸುವಿಯಲ್ಲಾ, ನಿನಗೆ ಬೇಕಾ ದರೆ ತಿನ್ನು ಇಲ್ಲದಿದ್ದರೆ ಹೋಗು"ಎಂದಿತು ಮೊದಲನೆಇರುವೆ. "ನನಗೆ ಈ ಕಪ್ಪೆಯ ಮಾಂಸ ಬೇಡವೇ ಬೇಡ ಉಪಾಯದ ಸ್ಥಳದಲ್ಲಿ ಹೆಚ್ಚು ಹೊತ್ತುಉಳಿಯುವುದೂ ಅಪಾಯವೇ, ಮೊದಲು ಇಲ್ಲಿಂದ ತಪ್ಪಿಸುವುದೇಉತ್ತಮ" ಎಂದು ಎರಡನೆ ಇರುವೆ ಅಲ್ಲಿಂದ ಜಾಗ ಖಾಲಿ ಮಾಡಿತು. ಎರಡನೆ *ಇರುವೆ ರಸ್ತೆಯನ್ನು ದಾಟಬೇಕೆಂದಿರುವಷ್ಟರಲ್ಲಿ ಸೋಯ್ ಎನ್ನುವ ಶಬ್ಧದೊಂದಿಗೆ ಕಾರೊಂದು ದಾಟಿದ ಸದ್ದು......*

ಅಜ್ಜನ ಹೊಟ್ಟೆ ಹಿಡ್ಕೊಂಡು ಮೊಮ್ಮಗ ನೇತಾಡ್ತಾನೆ..ಗೇರುಬೀಜ

ನನ್ನ ಕಂಡರೆ ಎಲ್ಲರೂ ಒದೀತಾರೆ .. ಚೆಂಡು

ಸಾಗರ ಪುತ್ರ, ಸಾರಿಗೆ ಮಿತ್ರ ... ಉಪ್ಪು

ಮೂಲೆಯಲ್ಲಿರುವ ಮುದುಕಿಗೆ ಮೈಯೆಲ್ಲಾ ಕಣ್ಣು ... ಜರಡಿ

ಮನೇಲಿದ್ರೆ ಮೊಗ್ಗು, ಹೊರಗೆ ಬಂದ್ರೆ ಹೂ ... ಕೊಡೆ

ಒಳ್ಳೆ ಕೋಳಿ ಮುಳ್ಳಲ್ಲಿ ಮೊಟ್ಟೆ ಇಡ್ತದೆ ... ಲಿಂಬೆ

ಒಂದು ಕಂಬಕ್ಕೆ ನಾಲ್ಕು ಕಿವಿ... ಲವಂಗ

ಒಂದು ಹಸ್ತಕ್ಕೆ ನೂರೆಂಟು ಬೆರಳು ... ಬಾಳೆಗೊನೆ

ಸಣ್ಣಸಣ್ಣ ಮಕ್ಕಳಿಗೆ ಮಣ್ಣಲ್ಲೇ ಕೆಲಸ ... ಗೆದ್ದಲು

*~ ಸಂಗ್ರಹ... ಸಾನಿಯ 10 ಎ*

---

**ಇದ್ದರೆ ಹೀಗಿರಬೇಕು .........ಶರಣ್ಯ. ಡಿ 9 ಎ**

ಮತ್ತೊಮ್ಮೆ ಹುಟ್ಟಿದರೆ ಹೂವಿನಮೊಗ್ಗಿನರೀತಿ ಅರಳಬೇಕು

ಬೆಳೆದರೆ ಗಗನಚುಂಬಿ ಕಟ್ಟಡದ ಹಾಗೆ ಬೆಳೆಯಬೇಕು

ಜೀವನದಲ್ಲಿ ಬೇವು ಬೆಲ್ಲದೊಂದಿಗೆ ಬದುಕಬೇಕು

ದೇಶಕ್ಕಾಗಿ ಒಳಿತನ್ನೇ ಮಾಡಬೇಕು

ಇನ್ನೊಬ್ಬರಿಗೆ ಮಾದರಿಯಾಗಿ ಬದುಕಬೇಕು

............... **ಮೊಹರಂ** ..............ಆಯಿಶತ್ ಫೌಜಿಯಾ 10 ಎ

ಇಸ್ಲಾಮಿಕ್ ತಿಂಗಳಿನ ಪ್ರಥಮ ತಿಂಗಳು ಮೊಹರಂ. ಚಂದ್ರನ ಚಲನೆಯ ಆಧಾರದಲ್ಲಿ ಇಸ್ಲಾಮಿನ ನಾಲ್ಕು ತಿಂಗಳನ್ನು ಪವಿತ್ರ ಮಾಸಗಳೆಂದು ನಂಬಲಾಗಿದೆ. ಮೊಹರಂ ಇದರಲ್ಲಿ ಒಂದು. ಮೊಹರಂ ಎಂದರೆ ಅರೇಬಿಕ್ ಭಾಷೆಯಲ್ಲಿ ನಿಷೇಧ ಎಂದರ್ಥ. ವಾಸ್ತವದಲ್ಲಿ ಇದು ಅರೇಬಿಕ್ ನ ಹರಾಂ ಅಂದರೆ ಪಾಪದಿಂದ ಕೂಡಿದ ಎಂಬ ಪದದಿಂದ ಉದ್ಭವವಾಗಿದೆ. ಅಲ್ಲದೆ ಈ ತಿಂಗಳಲ್ಲಿಯೇ ಪ್ರವಾದಿ ಮೊಹಮ್ಮದರ ಮೊಮ್ಮಗನಾದ ಹುಸೇನ್ ರನ್ನು ಕ್ರಿ. ಶ. ೬೮೦ ರ ಕರ್ಬಲಾ ಯುದ್ಧದಲ್ಲಿ ಕುಟುಂಬ ಸಹಿತ ಕೊಲ್ಲಲಾಗಿತ್ತು. ಆದ್ದರಿಂದಲೇ ವಿಶ್ವಾದ್ಯಂತ

ಮುಸಲ್ಮಾನರು ಈತಿಂಗಳನ್ನು ಹುತಾತ್ಮ ಹುಸೇನರ ಸ್ಮರಣಾರ್ಥವಾಗಿ ಆಚರಿಸುವರು. ಕರ್ಬಲಾ ಯುದ್ಧವು ಮೊಹರಂ ೧ ರಿಂದ ಆರಂಭಗೊಂಡು ಸತತವಾಗಿ ೧೦ ದಿನಗಳ ವರೆಗೆ ನಡೆಯುತ್ತದೆ. ಈ ಹತ್ತು ದಿನಗಳ ಅವಧಿಗೆ ಅಷುರಾ ಎಂದು ಕರೆಯುವರು. ಅರೇಬಿಕ್ ಭಾಷೆಯಲ್ಲಿ ಅಷು ಎಂದರೆ ಹತ್ತು. ಅಷುರೀ ಎಂದರೆ ಹತ್ತುದಿನ ಎಂದು ಅರ್ಥ. ಆದ್ದರಿಂದ ಮೊಹರಂನ ಮೊದಲ ದಿನವು ನವವರ್ಷದ ಮೊದಲ ದಿನವಾಗಿದ್ದರೆ, ಹತ್ತನೆಯ ದಿನ ಅಷುರಾ ಎಂದೇ ಪ್ರಸಿದ್ಧ. ಕರ್ಬಲಾ ಯುದ್ಧದ ೯ನೆಯ ದಿನ ಮತ್ತು ಹುಸೇನರ ಹತ್ಯೆಯಾದ ೧೦ನೇ ದಿನವನ್ನು ಮುಸಲ್ಮಾನರು ಉಪವಾಸದ ಮೂಲಕ ಆಚರಿಸುವರು. ಇದು ಹಿಂದೂ ಮಸಲ್ಮಾನರ ಭಾವೈಕ್ಯದ ಹಬ್ಬವಾಗಿಯೂ ಪ್ರಸಿದ್ಧ. ಗ್ರಾಮೀಣ ಪ್ರದೇಶಗಳಲ್ಲಿ ಇಂದು ಕೂಡ ಯಾವುದೇ ತಾರತಮ್ಯವಿಲ್ಲದೆ ಎಲ್ಲ ಜಾನಾಂಗದವರು ಇದರಲ್ಲಿ ಪಾಲ್ಗೊಳ್ಳುವರು. ಗ್ರಾಮೀಣ ಪ್ರದೇಶದಲ್ಲಿ ಈ ಹಬ್ಬವು ಬಾಬಯ್ಯ ಹಬ್ಬ ಎಂದೂ ಕರೆಯಲ್ಪಡುತ್ತದೆ.

ನಗೆಹನಿ ಶರಣ್ಯ. ಡಿ 9 ಎ

ಗೋಪಿ: ನಮ್ಮ ಅಪ್ಪ ಎಲ್ಲರ ಸುಖ ದುಖಗಳನ್ನು ಹಂಚುತ್ತಾರೆ

ಗುಂಡ: ಹೌದಾ ಹಾಗಾದರೆ ನಿಮ್ಮಪ್ಪ ದೊಡ್ಡ ವ್ಯಕ್ತೀನೇ ಇರಬೇಕಲ್ಲ...

ಗೋಪಿ: ಅವರು ಪೋಸ್ಟ್ ಮ್ಯಾನ್

ಅಮ್ಮ: ಮನೆಗೆ ನಂಟರು ಬಂದಿದ್ದಾರೆ, ಶರಬತ್ ಮಾಡೋಣ, ಹೋಗಿ ನಿಂಬೆ ಹಣ್ಣು ತೆಗೆದುಕೊಂಡು ಬಾ

ಗುಂಡ: ಅಷ್ಟು ತೊಂದರೆ ಏಕಮ್ಮ ಹೊಸ ವಿಮ್ ನಲ್ಲಿ ನೂರು ನಿಂಬೆಯ ಶಕ್ತಿ ಇದೆಯಲ್ಲ. ಅದನ್ನು ಹಾಕು.

### ಮಹಾತ್ಯಾಗಿ

ಸಕಲ ಸಸ್ಯರಾಶಿಗಳು ಬದುಕುವುವು ಪರರಿಗಾಗಿ!
ತೃಣ, ಹೂವು, ತರುಲತೆ, ಮಹಾವೃಕ್ಷ ಜಾತಿ-
ಪೊರೆದು ಸಲಹುವುದು; ತನ್ನಿರವ ಮರೆತು ಬಾಳುವುದು!
ಕೋಟ್ಯನುಕೋಟಿ ಕ್ರಿಮಿಕೀಟ ಸಂಕುಲ,
ಪಕ್ಷಿ, ಪ್ರಾಣಿ, ಮಾನವಜಾತಿಗಾಗಿ!
ಆಸೆ, ಆಮಿಷಗಯಳಿರದೆ,ನೋವು, ಸಂಕಟ ಪಡದೆ,
ನೀಡುವುದು ತನ್ನ ಜೀವಿತನ ಕೊಡುಗೆಯಾಗಿ!ಮಹಾತ್ಯಾಗಿಯಾಗಿ!

ಲೇಖಕರ ಪರಿಚಯ....ಸದಾಶಿವ ಒಡೆಯರ್

*ಸತ್ಯದೈವ*

*ಮಾಯ ರೂಪದ ಸತ್ಯ ದೈವ ಈ*

*ತೇಲಿತ್ ನಲಿಪುವ ಈ ನಲಿತ್ ತೇಲಿಪುವ*

*ಕರಿರಂಗ್ ದ...ಮೊನೆಐಸಿರಾ*

*ಕರಿಗಂಧನೆ...ನಿನ್ನಪ್ರಸದಾ //ಮಾಯ//*

*ಕಿಣ್ಯ ಮಣ್ಣ್ ದಾ...ಪುಣ್ಯ ಮಣ್ಣ್ ಡ್...*

*ಸತ್ಯ ಧರ್ಮೊದಾ...ಪುಣ್ಯ ಕ್ಷೇತ್ರಡ್...*

*ನೆಲೆತಿ ದೈವ ಈ...ಸ್ವಾಮಿಯೇ ಅಜ್ಜ...*

*ನಂಬಿ ಭಕ್ತೆರೆ...ಕಾಪುಲ ಇಯೇ...//ಮಾಯ//*

*ತರೆಟ್ ಮುಟ್ಟಲೇ...ದೀದ್ ನಲಿಪುವಾ...*

*ಕೈಟ್ ಬೆತ್ತೋನೂ...ಪತ್ತ್ ನಲಿಪುವಾ...ಬತ್ತಿ ಕಷ್ಟೋನೂ...ದೂರ ಮಲ್ಪುವಾ...*

*ನೆನೆತಿ ಕಾರ್ಯೊನು...ಈ ವದಗಾವ...//ಮಾಯ//*

*..... ಅಶ್ವಿನಿ 10 ಎ*

## ಸಂಜೆ ಮೌನ

ದಟ್ಟ ಹಸುರನು ತೊಟ್ಟ ಪುಷ್ಪವಾಗಿಹ ಗುಡ್ಡ
ಮೈಯ ಚಾಚಿಹವಿಲ್ಲಿ ಸಾಲುಸಾಲು.
ಹಚ್ಚ ಹಸುರಲ್ಲ ಇದು, ಹುಚ್ಚ ಹಸುರಿನ ಬುಗ್ಗೆ
ಲಗ್ಗೆ ನುಗ್ಗಿಹುದಿಲ್ಲಿ ಎತ್ತೆತ್ತಲೂ.

ಒಂದೆ ಬಾಳಿನ ಬಿಂಬ ನೂರು ಮೈ ತಳೆದಂತೆ
ನೂರು ಬಗೆ ಆಕಾರ, ನೂರು ಚೆಲುವು.
ಗುಡ್ಡದೀ ಕಣಿವೆಯಲಿ ನಿಂತ ಮಿಂಚಿನ ಸರಸಿ
ಯಂತಿರುವ ಸಂಜೆಯಲಿ ರಸದ ನಲಿವು.

ಮೌನ, ಸಂಜೆಯ ಮೌನ, ನಗರ ನಾಗರಿಕತೆಯ
ಯಂತ್ರಗಳು ಕದಡದಿಹ ಮಂತ್ರ ಮೌನ.

ಎಲ್ಲ ನಾದಂಗಳಿಗು ನಾತ್ರಕೆಯವ್ರೋಲಿರುವ
ಚಿನ್ಮೌನವಾಗಿಹುದು ಈ ಕಾನನ.
ಬಾನ ಮೌನದ ಗೆಜ್ಜೆ ಝುಲ್ಲೆ ಜಾರಿದೊಲು
ಅಲ್ಲೊಂದು ಇಲ್ಲೊಂದು ಹಕ್ಕಿ ನಿನದ
ಬುವಿಯ ಎದೆ ಹಿಗ್ಗೆದ್ದು ಬುಗ್ಗೆಯಾದೆಲು  ಎಲ್ಲೋ
ನವಿಲ ಕೇಕೆಯ ಸದ್ದು ಗುಡ್ಡದೊಳಗೆ.
ಈ ಮೌನ ನಾದಗಳ ದ್ವಂದ್ವ ಲೀಲೆಗೆ ಸಂದು
ಮುಗ್ಧವಾಗಿದೆ ಮನವು  ಬೆರಗಿನಲ್ಲಿ,
ನೂರಬಗೆ ನಾದದಲಿ ಈ ಮೌನ ಹೊಮ್ಮದಿರೆ
ಜಗದ ಚೆಲುವಿಗೆ ಬೇರೆ ವಾಣಿಯೆಲ್ಲಿ ?

..............................................................

*ಕನ್ನಡ ಎಂದರೆ ಬರಿನುಡಿಯಲ್ಲ*
*ಹಿರಿದಿದೆ ಅದರರ್ಥ*
*ಜಲವೆಂದರೆ ಕೇವಲ ನೀರಲ್ಲ*
*ಅದುಪಾವನ ತೀರ್ಥ*
*ಕನ್ನಡವೆಂದರೆ ಬರಿನಾಡಲ್ಲ*
*ಭೂಪಟಕೇ ಚುಕ್ಕೆ*
*ಮರವೆಂದರೆ ಬರಿ ಕಟ್ಟಿಗೆಯಲ್ಲ*
*ಶ್ರೀಗಂಧದ ಚಕ್ಕೆ*

..............................................................

ಪ್ರೀತಿಯ ಮಕ್ಕಳೇ,

ಜೀವನದ ಎಲ್ಲಾ  ಕ್ಷೇತ್ರಗಳಲ್ಲಿಯೂ ಇಂದು ಕಂಪ್ಯೂಟರನ್ನು ಉಪಯೋಗಿಸುತ್ತಿದ್ದಾರಲ್ಲವೇ? ಅಂಗಡಿಗಳು, ಆಸ್ಪತ್ರೆಗಳಿಂದ ತೊಡಗಿ ಬಾಹ್ಯಕಾಶ ಕೇಂದ್ರಗಳವರೆಗೆ ಈ ಯಂತ್ರವನ್ನು ನಾವು ಉಪಯೋಗಿಸುತ್ತಿದ್ದೇವೆ. ಕಂಪ್ಯೂಟರುಗಳನ್ನು ಸರಿಯಾಗಿ ಉಪಯೋಗಿಸಲು ಕಲಿಯುವುದು, ಆದನ್ನು ಜೀವನ ಸೌಕರ್ಯಗಳನ್ನು ಉತ್ತಮಗೊಳಿಸಲು ಬಳಸುವುದು ಇವೆಲ್ಲವು ಕಂಪ್ಯೂಟರಿನ ವೈವಿಧ್ಯವಾದ ಉಪಯೋಗದಿಂದ ಸಾಧ್ಯವಾಗುವುದು.

ಕಂಪ್ಯೂಟರ್ ಉಪಯೋಗಿಸಿ ಮಾಡುವ ವಿವಿಧ ಚಟುವಟಿಕೆಗಳನ್ನು ಈ ಪುಸ್ತಕದಲ್ಲಿ ಸೇರಿಸಲಾಗಿದೆ. ಚಿತ್ರ ರಚಿಸಲು, ಹಾಡನ್ನು ಹಾಡಿ ರೆಕಾರ್ಡ್ ಮಾಡಲು ಮಾತ್ರವಲ್ಲದೆ ಗಣಿತ ಮತ್ತು ವಿಜ್ಞಾನವನ್ನು ಕಲಿಯಲು ಸಹಾಯಕವಾಗುವ ವಿವಿಧ ಚಟುವಟಿಕೆಗಳನ್ನೂ ಇದರಲ್ಲಿ ಸೇರಿಸಲಾಗಿದೆ. ಇವುಗಳನ್ನು ಸರಿಯಾಗಿ ಅಭ್ಯಸಿಸುವುದರಿಂದ ಇತರ ವಿಷಯಗಳ ಕಲಿಕೆಗೆ ಪ್ರಯೋಜನಕಾರಿಯಾಗುವುದು.

## ಐದು ಬೆರಳು ಕೂಡಿ

**ಐದು ಬೆರಳು ಕೂಡಿ ಒಂದು ಮುಷ್ಟಿಯೂ**
**ಹಲವು ಮಂದಿ ಸೇರಿ ಈ ಸಮಷ್ಟಿಯೂ**
**ಬೇರೆ ಬೇರೆ ಒಕ್ಕಲೂ ಒಂದೆ ತಾಯ ಮಕ್ಕಳೂ**
**ಕೂಡಿ ಹಾಡಿದಾಗ ಗೆಲುವು ಗೀತೆಗೇ ಭರತ ಮಾತೆಗೇ**
**ಮೊಳಗಲಿ ಮೊಳಗಲಿ ನಾಡ**
**ಮೂಡಲೀ ಮೂಡಲೀ ಸುಪ್ರಭಾತವೂ**
**ಗೀತವೂ**
**ಹಾಮಾಲಯದ ನೆತ್ತಿಯಲ್ಲಿ ಕಾಶ್ಮೀರದ ಭಿತ್ತಿಯಲ್ಲಿ**
**ಅಸ್ಸಾಮಿನ ಕಾಡಿನಲ್ಲಿ ಹೊತ್ತಿವುರಿವ ಬೆಂಕಿ ಹಾರಿತಣ್ಣಗಾಗಲೀ**
**ಭಂಜರಲ್ಲಿ ಬೆಳೆದು ಹಚ್ಚ ಹಸಿರು ತೂಗಲೀ**
**ಗಂವೇರಿಗೆ ತುಂಗೆ ಕಾಯ ತಬ್ಬಿಕೊಳ್ಳಲೀ**
**ಲಡಾಕ ನೇಫ ಜಂತುಗಳಲಿ ಮಂತ್ರಾಲಯ ಗುಡಿಗಳಲ್ಲಿ**
**ಭತ್ತ ಗೋಧಿ ಬೆಳೆಯುವಲ್ಲಿ ಪ್ರೀತಿಯು ಮೈ ತಳೆಯು**
**ದುಡಿದ ಹಿಂದು ಮುಸಲ್ಮಾನರೊಂದು ಗೂಡಲೀ**
**ಆರದಿರಲಿ ಪ್ರೀತಿ ದೀಪ ಕಣ್ಣಗೂಡಲೀ**
**ಎದೆಯ ಕೊಳೆಗಳನ್ನು ಅಶ್ರುಧಾರೆ ತೆಳೆಯಲಿ.**

.................................................................

ನಮ್ಮ ಊರಿನ ಪದ್ದತಿಯಲ್ಲಿ ಆಟಿ ತಿಂಗಳಲ್ಲಿ ಮೊದಲಿನ ಆದಿತ್ಯವಾರ ಬಾಳ ಗೊನೆ ಕಡಿಯುವುದು. ಆಟಿಯಲ್ಲಿ ಮೆಚ್ಚಿ ಜಾತ್ರೆ ನಡೆಯುತ್ತದೆ. ಈ ಮೆಚ್ಚಿ ಜಾತ್ರೆ ಕಳೆದ ಮರುದಿನದಿಂದ ದೈವ ನರ್ತನದವರು ಊರಿನ ಮಾರಿ ಓಡಿಸುವ ಕ್ರಮದಂತೆ ಕಳೆಂಜನ ವೇಷ ಧರಿಸಿ ಮನೆ ಮನೆಗೆ ಹೋಗಿ ನರ್ತನ ಮಾಡಿ ಮಾರಿ ಕಳೆದು ಓಡಿಸುವ ಕ್ರಮ ಮಾಡುತ್ತಾರೆ.

ಕೆಳಂಜ ಕೆಳಂಜನ ಮಗೆ ಏರೆ ಮಗೆನಾ
ಆಟಿ ಮುಪ್ಪದಿನ ಕಳೆಂಜ ಮಗಯಿಲ್ಲಲ್
ಸೊಣ ಮುಪ್ಪದಿನ ಮಾಮಿಲ್ಲಲ್
ಕಳೆಂಜ ಕಳೆಂಜ ಮಗೆ ಏರೆ ಮಗೆನಾ

ಪುಲಿಂಕಟೆ,ಪುಲಿಂಕಟೆದ ಚೋಲಿ, ಪೆಲತ್ತರಿ, ಪೆಲತ್ತರಿದ ಚೋಲಿ,ಉಪ್ಪಡ್ ಪಚ್ಚಿಲ್,ಅರಿ, ಭಾರ್,ತಾರಾಯಿ ಮಾತಾ ಕಟ್ಟ್ ದ್ ಕಳೆಂಜನ ಪೊಟ್ಟೆ ಜಿಂಜಾಲೆ. ನಾವು ಕೊಡುವಂತಹ ಹಣ, ತೆಂಗಿನ ಕಾಯಿ, ಭತ್ತ ಮುಂತಾದವುಗಳನ್ನು ತೆಗೆದು ಕೊಂಡು ಹೋಗುತ್ತಾರೆ.

ಮರುದಿನ ಮೆಚ್ಚಿ ಜಾತ್ರೆ ಕಳೆದ ಮರುದಿನ ನಲಿಕೆಯವರು ತನ್ನ ಮಕ್ಕಳಿಗೆ ಕೆಳೆಂಜನ ವೇಷ ಹಾಕಿ ತೆಂಗಿನ ಮರದ ಗರಿಯಿಂದ ಸೊಂಟಕ್ಕೆ ಕಟ್ಟಿಕೊಂಡು ಶೇಂದಿ ಮರದ ಗರಿಯಿಂದ ರಚನೆ ಮಾಡಿದ ಕೊಡೆಯೊಂದಿಗೆ ಮುಖಕ್ಕೆ ಬಣ್ಣ ಹಚ್ಚಿ ಕಳೆಂಜನನ್ನು ಅಲಂಕರಿಸುತ್ತಾರೆ.ಮತ್ತೆ ಡೋಲು ಬಡಿಯುತ್ತಾ ಮನೆ ಮನೆಗೆ ಹೋಗಿ ಸಂಧಿ ಹೇಳಿ (ಪಾಡ್ದಾನ) ಕಳಂಜನನ್ನು ಕುಣಿಸುತ್ತಾರೆ.

ಮನೆಮಂದಿಯೆಲ್ಲ ನೋಡಿ ಸಂತೋಷಪಡುತ್ತಾರೆ.ಚಿಕ್ಕ ಚಿಕ್ಕ ಮಕ್ಕಳು ಕಳೆಂಜನ ಹಿಂದೆಯಿಂದ ಸ್ವಲ್ಪ ದೂರ ಕುಣಿದು ಕುಪ್ಪಳಿಸಿ ಕೊಂಡು ಹೋಗುತ್ತಾರೆ.

ಮನೆ ಮನೆಗೆ ಹೋಗಿ

ಕಳೆಂಜ ಕಳೆಂಜನ ಮಗೆ ಏರೆ ಮಗೆನಾ
ಆಟಿ ಮುಪ್ಪದಿನ ಕಳೆಂಜ ಮಗಯಿಲ್ಲಲ್
ಸೊಣ ಮುಪ್ಪದಿನ ಮಾಮಿಲ್ಲಲ್

ಕಳೆಂಜ ಕಳೆಂಜನ ಮಗೆ ಏರೆ ಮಗೆನಾ

ಎಂಬ ಪಾಡ್ದಾನ ಹೇಳಿ ಕೆಳೆಂಜನ್ನು ಕುಣಿಸುತ್ತಾರೆ. ಊರಿನ ಮಾರಿಯನ್ನು ಓಡಿಸುತ್ತಾರೆ. ಇದನ್ನು ತುಳುನಾಡಿನ ಜನರು ತುಳು ಭಾಷೆಯಲ್ಲಿ 'ಮಾರಿ ದೇರುನೆ' ಎಂಬ ಪದವನ್ನು ನುಡಿಯುತ್ತಾರೆ.ಇದು ತುಳು ನಾಡಿನ ಆಚರಣೆ ಒಂದು ಸಂಸ್ಕೃತಿಯಾಗಿದೆ.

..............................................

## ರೈತ ನಮನ

ಹರ್ಷಿತ. ಎನ್. 9 ಎ

ಮಳೆಯು ಬಂದಿತು
ಹೊಳೆಯು ತುಂಬಿತು
ಇಳೆಯು ತಂಪು ಆಯಿತು
ಹುಲ್ಲು ಮೊಳಯಿತು
ಗಿಡವು ಚಿಗುರಿತು
ನೆಲವು ತಂಪು ಹರಡಿತು
ರೈತನೆದ್ದನು
ಹೊಲಕೆ ನಡೆದನು
ಶ್ರಮದಿ ದುಡಿದು ದಣಿದನು
ಭತ್ತ ಬೆಳೆಯುತ
ನಮಗೆ ನಿಡುತ
ನಮ್ಮ ಹಸಿವ ಕಳೆದನು
ಭಾಗಿ ನಮಿಸುವೆ
ದುಡಿವ ರೈತಗಿ
ತಲೆಯ ಬಾಗಿ ವಂದಿಪೆ

.................................................................................

## ನಾನೊಂದು ಹಕ್ಕಿಯಾಗಿದ್ದರೆ

*ಹರ್ಷಿತ. ಎನ್. 9 ಎ*

ನಾನೊಂದು ಹಕ್ಕಿಯಾಗಿದ್ದರೆ
ಬಂದನವಿಲ್ಲದ ವಿಶಾಲ
ಆಗಸದಲ್ಲಿ ಹಾರಾಡುತಿದ್ದೆ
ಸಮೃದ್ಧವಾದ ಸಂಪತ್ತಿರುವ
ಕಾಡಿನಲ್ಲಿ ಹುಡುಕಿದರೂ
ಅದರ ನೈಜಕತೆ ಕಂದುತಿರಲಿಲ್ಲ
ಊರೂರು ಸುತ್ತಾಡಿ ವೈವಿದ್ಯಮಯ
ಪ್ರಕೃತಿಯ ಸೌಂದಯ ಆಸ್ವದಿಸುತಿದ್ದೆ
ನಿದ್ದೆಯಲ್ಲಿಹ ಮಾನವ ಕೋಟಿಗೆ
ಮದುರನಾದದ ಮೂಲಕ ಬೆಳಗಾಗುವುದನ್ನು ತಿಳಿಸುತಿದ್ದೆ

.......................................................................................

## ಪುಸ್ತಕ ನಮನ

....... ಸಂದೀಪ್ 9 ಬಿ

ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ ಮತ್ತು ಸಂದೇಶಗಳು ಎಂಬ ಪುಸ್ತಕವನ್ನು ಅ.ನೆ.ಕ ಎಂಬ ಲೇಖಕರು ಮಕ್ಕಳಿಗಾಗಿ ಬರೆದಿರುತ್ತಾರೆ.

1893 ನೆಯ ಇಸವಿ ಜನವರಿ 12 ನೆಯ ತಾರೀಕಿನಂದು ಮಕರ ಸಂಕ್ರಾಂತಿಯ ಶುಭ ದಿನದಂದು ಶೀ ಸ್ವಾಮಿ ವಿವೇಕಾನಂದರು ವಿಶ್ವನಾಥ ಮತ್ತು ಭುವನೇಶ್ವರಿದೇವಿ ದಂಪತಿಗಳ ಪುತ್ರನಾಗಿ ಜನಿಸಿದರು. ಅವರಿಗೆ ಮೊದಲು ವೀರೇಶ್ವರ ಎಂದು ನಾಮಕರಣ ಮಾಡಲಾಯಿತು. ಮುಂದೆ ನರೇಂದ್ರನೆಂದು ಹೆಸರನ್ನು ಬದಲಾಯಿಸಿದರು.ನರೇಂದ್ರರಿಗೆ ಕರುಣೆ ತುಂಬಿದ ಮನಸ್ಸು,ಪ್ರೀತಿ ತುಂಬಿದ ಹೃದಯವಿತ್ತು.ಚಿಕ್ಕಂದಿನಲ್ಲಿ ಅವರು ಬಹಳ ತುಂಟತನಕ್ಕೆ ಹೆಸರಾಗಿದ್ದರು. ಹಾಗೂ ಅವರಿಗೆ ಮೂಕ ಜೀವಿಗಳೆಂದರೆ ಪ್ರಾಣ. ಅವರು ತಮ್ಮ ೭ನೇ ವಯಸ್ಸಿನಲ್ಲಿಯೇ ಅಂದರೆ ಎಲ್ಲಾ ಮಕ್ಕಳು ಅಕ್ಷರಗಳನ್ನು ಕಲಿಯುವ ಸಂದಭದಲ್ಲಿ ಓದುವುದು,ಬರೆಯುವುದು ಹಾಗೂ ರಾಮಯಣ, ಮಹಾಭಾರತ, ಭಗವದ್ಗಿತೆ ಎಂಬಿವುಗಳನ್ನು ಕಂಠಪಾಠ ಮಾಡಿಕೊಂಡಂತೆ ಒಪ್ಪಿಸುತ್ತಿದ್ದರು. ದೊಡ್ಡವರಾದಂತೆ ತನ್ನ ಗೆಳೆಯರಿಗೆ ಅಥವಾ

ಇತರ ಕಷ್ಟದಲ್ಲಿರುವವರಿಗೆ, ದಾರಿ ಹೋಕರಿಗೆ ತನ್ನ ಈ ಎಳೆಯ ವಯಸ್ಸಿನಲ್ಲಿಯೇ ನೆರವಾಗುತ್ತಿದ್ದರು. ಅವರು ಆಟ ಪಾಠಗಳಲ್ಲಿ ಅಲ್ಲದೆ ಸಾಹಿತ್ಯದಲ್ಲಿ ಮತ್ತು ಇತಿಹಾಸಗಳನ್ನು ತಿಳಿದುಕೊಳ್ಳುವುದರಲ್ಲಿ ಆಸಕ್ತಿಯನ್ನು ಹೊಂದಿದ್ದರು.ಅವರಿಗೆ ಶಾಲೆಯಲ್ಲಿ ಗೆಳೆಯರನ್ನು ಶಿಕ್ಷಿಸುವುದು ದಂಡಿಸುವುದು ಇಷ್ಟವಲ್ಲ. ಹೀಗೆ ಯರಾದರೂ ಶಿಕ್ಷಿಸಿದರೆ ನರೇಂದ್ರರು ಕೂಡಾ ಆ ಶಿಕ್ಷೆಗೆ ಪಾತ್ರರು ಆಗುತ್ತಿದ್ದದರು.

........................................................................................

## ಕ್ಷೇತ್ರ ಪರಿಚಯ

### ಬಾಯಾರು

ತೆಂಗಿನ ಮರಗಳಿಂದಾವೃತವಾಗಿ ಕಂಗೊಳಿಸುತ್ತಿರುವ ಕಡಲ ತೀರದ ರಾಜ್ಯ ಕೇರಳ , ಕೇರಳದ ಪ್ರಸಿದ್ದ ಜಿಲ್ಲೆಗಳಲ್ಲಿ ಒಂದಾದ ಕಾಸರಗೋಡು, ಕಾಸರಗೋಡು ಜಿಲ್ಲೆಯಲ್ಲಿನ ಪೈವಳಿಕೆ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಬಾಯಾರು ಗ್ರಾಮದ ಶ್ರೀಪಂಚಲಿಂಗೇಶ್ವರ ದೇವಸ್ತಾನವು ಪ್ರಕೃತಿಯ ಸುಂದರ ಮಡಿಲಲ್ಲಿ ಭಕ್ತರ ಕಣ್ಣನು ಸೆಳೆಯುತ್ತದೆ. ಈ ದೇವಾಲಯವದ ಉತ್ತರ ದಿಕ್ಕಿನಲ್ಲಿ ಮಾರ್ಗದ ಬದಿಯ ವಿಶಾಲವಾದ ಬದಿಯಾರು ಎಂಬಲ್ಲಿ ಅಯ್ಯನ ಬಿಂಟರುಗಳು ಪಿಲಿಚಾಮುಂಡಿ ಮತ್ತು ಮಲರಾಯ ದೈವಗಳ ಗುಡಿಗಳಿವೆ. ದೈವಸ್ಥಾನದಿಂದ ೧೦೦ ಮೀ ನಷ್ಟು ದೂರದಲ್ಲಿರುವ ಗದ್ದೆಯಲ್ಲಿ ಕೊರತಿ ದೈವಕ್ಕೆ ಮತ್ತು ಗುಳಿಗ ದೈವಕ್ಕೆ ಕಟ್ಟೆಗಳಿವೆ

ಬಾಯಾರು ಎಂಬ ಊರಿಗೆ ಬಾಯಾರು ಎಂಬ ಹೆಸರು ಬರಲು ಕೆಲವೂ ಕಾರಣಗಳಿವೆ. ವಿದ್ವಾಂಸರು ಮತ್ತು ಆಸಕ್ತಿಗೆ ಅನುಗುಣವಾಗಿ ವಿವಿಧ ರೀತಿಯಲ್ಲಿ ಅಭಿಪ್ರಾಯ ಪಟ್ಟಿರುತ್ತಾರೆ.

ಈ ಮಲರಾಯನ ತಾಣ ಬದಿಯಾರು,ಚಿಪ್ಪರು ,ಪೆರ್ವಡಿ , ಸುದೆಂಬಳ , ಕಲ್ಲಗದ್ದೆ ,ಹೆದ್ದಾರಿಕಟ್ಟೆ (ಗುಡ್ಡೆ) ,ಹೀಗೆ ಆರು ಪ್ರದೇಶದಲ್ಲಿದೆ. ಬಳ್ಳೂರಿನಲ್ಲಿಯೂ ಇದೆ. ಪಟ್ಟದಲ್ಲಿ

ಮಹಿಷಂದಾಯನಿರುವುದು. ಮಲರಾಯನು ಈ ಪ್ರಧಾನ ಆರು ಊರುಗಳಿರು ವುದರಿಂದಾಗಿ ಈ ಪ್ರದೇಶಕ್ಕೆ ಬಾಯಾರು ಎಂದು ಹೆಸರು ಬಂದಿರಬೇಕು .

ಬೈರವರು ಆರು ಬೈರವರಾರು ಬಾಯಾರು ಅಥವಾ ಬೈರವರ ಊರು ಇದ್ದದ್ದು ಬೈರವರೂರು ಬೈರಮಾರು ಬಾಯರು ಆಗಿದ್ದಿರಬೇಕು.

ಪೌರಾಣಿಕ ಹಿನ್ನೆಲೆಯ ಪ್ರಕಾರ ರಾವಣನು ಇದ್ದದು ತ್ರೇತಾಯುಗದಲ್ಲಿ ಅವನು ಶಿವ ಭಕ್ತ ಬನವಾಸಿಯ ಮಧುಕರೀಶ್ವರ ದೇವಸ್ಥಾನ ತಾಮ್ರಶಾಸನದ ಆಧಾರದಂತೆ ಈ ಪ್ರದೇಶವನ್ನು ಕ್ರಿ.ಪೂ ೨೦೦೦ದಲ್ಲಿ ಲಂಕೆಯ ರಾವಣ ಆಳುತ್ತಿದ್ದವನೆಂದು ತಿಳಿದು ಬರುವುದು.

ಬಾಯಾರಿನವರು ಎಲ್ಲರು ಒಂದೇ ಎಂಬ ಐಕ್ಯ ಭಾವನೆಯಿಂದ ಬಾಳುತ್ತಿದ್ದರೆ. ಮುಸ್ಲಿಂ, ಹಿಂದು, ಕ್ರೈಸ್ತ ಎಂಬೀ ವಿವಿಧ ಧರ್ಮದವರು ಒಬ್ಬೊಬ್ಬರಿಗೆ ಸಹಾಯ ಮಾಡುತ್ತ ಸಹಬಾಳ್ವೆಯಿಂದ ಬದುಕುತ್ತಿದ್ದಾರೆ. ಬಾಯಾರು ತುಳುವರ ನಾಡಗಿರಬಹುದು ಆದರೆ ಇಲ್ಲಿ ತುಳು ಮಾತ್ರವಲ್ಲ ಮಲಯಾಳ, ಕನ್ನಡ, ಎಂಬೀ ಬಾಷೆಗಳನ್ನು ಮಾತಾನಾಡುವವರು ಕೂಡ ಇದ್ದರೆ. ಹಿಂದುಗಳಿಗೆ ದೇವಸ್ಥಾನ, ಮುಸ್ಲಿಂಗಳಿಗೆ ಮಸೀದಿ ಎಂಬೀ ಆರಾಧನಾಲಯಗಳಿವೆ.

ಬಾಯಾರು ಹಸಿರು ಪ್ರಕೃತಿಯಿಂದ ಕೂಡಿದೆ. ಹಸಿರು ಸೀರೆಯನ್ನು ಉಟ್ಟು ಪ್ರಕೃತ್ತಿ ದೇವಿಯು ಕಂಗೋಳಿಸುತಿದಾಳೆ ಎಂಬಂತೆ ಬಾಸವಾಗುತ್ತದೆ.ಇಲ್ಲಿ ಹರಿಯುವ ನದಿ, ತೋಡುಗಳು ಮನಸ್ಸಿಗೆ ನೆಮ್ಮದಿಯನ್ನು ಕೊಡುತ್ತದೆ. ಇಲ್ಲಿರುವ ಪೊಸಡಿಗುಂಪೆಯು ಪ್ರವಾಸ ತಾಣಗಳಲ್ಲಿ ಒಂದಾಗಿದೆ. ಹಸಿರಿನಿಂದ ಕೂಡಿರುವ ಈ ಪ್ರಕೃತಿ ಸೌಂದರ್ಯವನ್ನು ನೋಡಲು ಕಣ್ಣೆರಡು ಸಾಲದು. ಒಮ್ಮೆಯಾದರು ಆ ಪ್ರಕೃತಿ ಸೌಂದರ್ಯವನ್ನು ಎಲ್ಲರು ಕಣ್ತುಂಬಿಕೊಳ್ಳಬೇಕು ಬಾಯಾರು ಸುಂದರ ಪ್ರಕೃತಿ ಮಡಿಲಲ್ಲಿದೆ. ವಿವಿಧ ಬಾಷೆ, ಜಾತಿ ಜನರನೊಳಗೊಂಡ ಪ್ರದೇಶ ಬಾಯಾರು. ಬಾಯಾರಿನಲ್ಲಿರುವವರೆಲ್ಲರು ಧನ್ಯರು.

## ಅನಾಥ ಮಗು , ............ಧನ್ಯಶ್ರೀ.ಬಿ 9 ಎ

ದಾರಿ ತೋರದ ಈ ಸಮಯದಲಿ
ಯಾರು ನೋಡಿಲ್ಲ ನನ್ನ
ಅಪ್ಪ ಅಮ್ಮ ಯಾರೂ ಇಲ್ಲ
ಮನೆ ಮಹಡಿ ಇಲ್ಲದ ನನಗೆ
ನಾನು ಏನು ಮಾಡಲಿ
ನಾನು ಅನಾಥನಾದೆ
ನನಗೆ ಯಾರು ಇಲ್ಲ
ಎಲ್ಲಿ ನೋಡಿದರೂ ಜನರಸಾಲು
ಗಮನಿಸ ದಿಹ ಜನರ ಮನಸು
ನಾನೇನು ಮಾಡಲಿ ಈ ಸಮಯದಲಿ
ಯಾರೂ ನೋಡಿಲ್ಲ ನನ್ನ

.............................................................................................

## ಬಾನಿನ ಹಕ್ಕಿ ...............................ಧನ್ಯಶ್ರೀ.ಬಿ 9 ಎ

ಚಿಲಿಪಿಲಿ ಗುಟ್ಟುತ್ತಾ
ಹಕ್ಕಿಯ ಹಾಡು
ಕೇಳುವುದಂಗಳ
ಮೂಲೆಲಿ ನೋಡು
ಗೂಡನ್ನು ಕಟ್ಟುತ್ತ
ಮರಗಳ ಕೊಂಬೆಗೆ
ಕೂಗುತ ಚಂದದಿ
ಕುಳಿತಿಹ ಮೋಡಿ
ಕೇಳಲು ಸಂತಸ
ಹಕ್ಕಿಗಳಿಂಚರ

ರೆಕ್ಕೆಯ ಬಡಿಯುತ
ಕುಣಿಯುವ ಜೋಡಿ
ನೀಲದ ಆಗಸ
ಕರೆದಿದೆ ಹಕ್ಕಿಯ
ಹಾರಲು ಬಾನಿನ
ಮೆಲಕೆ ಕೂಡಿ

## ವಿಶ್ವ ಜನಸಂಖ್ಯಾ ದಿನಾಚರಣೆ

ಜುಲೈ 11 ವಿಶ್ವ ಜನಸಂಖ್ಯಾ ದಿನದ ಪ್ರಯುಕ್ತ ವಿದ್ಯಾರ್ಥಿಗಳಾದ ಧನ್ಯಶ್ರೀ. ಡಿ ಮತ್ತು ಸ್ವರ್ಣಗೌರಿ ಜನಸಂಖ್ಯಾ ಹೆಚ್ಚಳ ಮತ್ತು ಸಮಸ್ಯೆ ಎಂಬ ವಿಷಯದ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ನೀಡಿದರು ಜನಸಂಖ್ಯಾ ಹೆಚ್ಚಳದ ಕುರಿತಾದ ಪೋಸ್ಟರ್ ಪ್ರದರ್ಶನವು ನಡೆಯಿತು.

...............................................................................

## ವಂದನೆ

......ವಂದನ.ಬಿ 9 ಎ

ವಾಯುವು ನೀಡುವ
ಶ್ವಾಸದ ಕೋಶಕೆ
ಸಹಾಯ ಮಾಡುವ
ವಾಯು ರಾಜರಿಗೆ ವಂದನೆ
ಜಲವನು ನೀಡುವ
ಪ್ರಕೃತಿಯ ಉಳಿಸುವ
ಬೆಂಕಿಯ ತಣಿಸುವ
ಜಲ ದೇವತೆಗೆ ವಂದನೆ
ಲೋಕದಲ್ಲೆಡೆ
ಬೆಳಕನು ಹರಡುತ

.....................................................................

## ಪ್ರಕೃತಿ ಸಂರಕ್ಷಣೆ

........... ಯಶಿತಾ ಮತ್ತು ಶರಣ್ಯ. 9 ಎ

ನಾವು ಕಾಣುವ ಸುತ್ತುಮುತ್ತಲಿನ ಪ್ರದೇಶವನ್ನು ಪರಿಸರ ಎನ್ನುತ್ತೇವೆ. ಬೆಟ್ಟ,ಗುಡ್ಡ, ನದಿಗಳಿಂದ ಕೂಡಿದ ಸುಂದರ ಪ್ರದೇಶವು ನಮ್ಮಲ್ಲಿದೆ. ಹಚ್ಚ ಹಸುರಿನಿಂದ ಕೂಡಿದೆ ನಮ್ಮ ಪರಿಸರ.

ಪರಿಸರವೆಂಬುದು ಸುಂದರ ದೃಶ್ಯಗಳು. ಅಂದರೆ ಇಂದು ಎಲ್ಲಿ ನೋಡಿದರಲ್ಲಿ ಭೂಕಂಪ,ಸುನಾಮಿ ಎಂಬಿವುಗಳು ಸಂಭವಿಸಿ ಪರಿಸರವು ನಾಶವಾಗಿ ಹೋಗಿದೆ. ಇದರಿಂದಾಗಿ ಅದೆಷ್ಟೋ ಸಾವು ನೋವುಗಳು ಸಂಭವಿತ್ತು. ಶ್ರೀಮಂತರಾಗಿದ್ದವರು ಕೂಡ ಒಂದೇ ದಿನದಲ್ಲಿ ಬಡವರಾಗಿದ್ದರು. ಸುಂದರ ಪ್ರಕೃತಿಗಳು ನಾಶ ಹೊಂದಿದ್ದವು. ಒಂದೇ ದಿನದಲ್ಲಿ ಎಲ್ಲರೂ ನಾಶಹೊಂದಿತ್ತು.

ನಮ್ಮ ದೇಶವನ್ನೇ ತೆಗೆದುಕೊಂಡರೆ ಜಲಪ್ರಳಯದಿಂದ ನಾಶಹೊಂದಿದ ಅದೆಷ್ಟೋ ಕುಟುಂಬಗಳು ಇಂದು ನಮ್ಮ ಕಣ್ಣು ಮುಂದೆ ಇದೆ. ಅದೆಷ್ಟೋ ಪ್ರಕೃತಿ ರಮಣೀಯ ಪ್ರವಾಸಿ ತಾಣಗಳು ನಾಶ ಹೊಂದಿದ್ದವು. ಕೊಡಗು,ಕೇರಳ ಎಂಬೀ ಸುಂದರ ತಾಣಗಳು ಜಲ ಪ್ರಳಯದಿಂದ ನಾಶಹೊಂದಿದ್ದವು. ಪ್ರವಾಸ ತಾಣಗಳ ನಾಶವು ಪ್ರವಾಸಿಗಳಿಗೆ ಬೇಸರದ ಸಂಗತಿಬಯಾಗಿದೆ. ಕೊಡಗು ಎಂಬ  ಸುಂದರ ಪ್ರಕೃತಿ ರಮಣೀಯ ಪ್ರದೇಶವು ಇಂದು ಬರಿದಾಗಿ ಹೋಗಿದೆ. ಹಚ್ಚ ಹಸುರಿನಿಂದ ಕೂಡಿದ ಪ್ರಕೃತಿ ಬರಿದಾಗಿ ಹೋಗಿದೆ.

ಆದರೆ ಇದಕ್ಕೆಲ್ಲಾ ಕಾರಣ ಮಾನವರೇ ಆಗಿದ್ದರೇ ಮಾನವನು ತನ್ನ ದುರಾಸೆಯಿಂದ ಪರಿಸರವನ್ನು ನಾಶಮಾಡಿದ್ದರು. ಕಾಡುಗಳ ನಾಶದಿಂದಾಗಿ ಹಲವು ಸಮಸ್ಯೆಗಳು ಎದುರಾಯಿತು. ಹಚ್ಚ ಹಸಿರಿನಿಂದ ಕೂಡಿದ ಪ್ರಕೃತಿಯು ಕಾಂಕ್ರೀಟ್ ಕಾಡುಗಳಿಂದ ಕೂಡಿದೆ.ಪ್ಲಾಸ್ಟಿಕನ್ನು ತನ್ನ ಉಪಯೋಗಕೋಸ್ಕರ ಮಾನವನು ಕಂಡುಹಿಡಿದನು. ಆದರೆ ಪ್ಲಾಸ್ಟಿಕನ್ನು ಉಪಯೊಗಿಸಿ ಪರಿಸರಕ್ಕೆ ಬಿಸಾಡಿ ಪ್ರಕೃತಿ ನಾಶವಾಗುತ್ತಿದೆ. ಮನುಷ್ಯನು ತನ್ನ ದುರಾಸೆಯಿಂದ ಪರಿಸರವನ್ನು ನಾಶ ಮಾಡುತ್ತಾರೆ.

ಆದರೆ ಅದುತಿರುಗಿ ಮನುಷ್ಯನಿಗೆ ಫಲಿಸುತ್ತದೆ. ಪರಿಸರ ನಾಶವು ನಮ್ಮ ನಾಶವಾಗಿದೆ. ಮರಗಳನ್ನು ಕಡಿಯುವುದರಿಂದಾಗಿ ಪ್ರಕೃತಿಯು ತಾಪಮಾನ ಹೆಚ್ಚಾಗುತ್ತದೆ. ಇದಲ್ಲದರ ಪರಿಣಾಮವಾಗಿ ಹಲವು ರೋಗಗಳು ಬಂದು ಅದೆಷೂ ಜೀವಗಳು ಬಲಿಯಾಗಿ ಹೋಯಿತು. ಪ್ರಕೃತಿ ನಾಶದಿಂದಾಗಿ ಭೂ ದೇವಿಯು ಮುನಿಸಿಕೂಂಡು ಮಾನವನ ಮೇಲೆ ಕೋಪಗೊಂಡಿದ್ದಾಳೆ. ಇದರಿಂದಾಗಿ ಭೂಕಂಪ ಸುನಾಮಿ ಎಂಬಿವುಗಳು ಸಂಭವಿಸುತ್ತದೆ. ಭೂಮಾತೆ ಕೋಪಗೊಂಡಲ್ಲಿ ನಮಗೆ ಎಳಿವಿಲ್ಲ. ಹಾಗಾಗಿ ಇದು ಅದೆಷ್ಟೊ ಪ್ರಾಣಗಳು ಹಾರಿಹೋಗಿದೆ.

..........................................................

ಕವನ

ನಮ್ಮ ಮನೆಯ ಪಕ್ಕದಲ್ಲಿ
ಹಲವು ಹೂಗಳಿದ್ದವು
ಆ ಹೂಗಳೆಲ್ಲವು
ತುಂಬ ಚಂದವಿದ್ದವು

ಅರಳಿದಂತ ಹೂವ ಕಂಡು
ಹಾರಿ ದುಂಬಿ ಬಂದಿತು
ಹೂವ ಮೇಲೆ ಕುಳಿತುಕೊಂಡು
ಜೇಂಕಾರ ಹೀರಿತು

ಮಕ್ಕಳೆಲ್ಲ ಹೂವ ಕಂಡು
ಹಾರಿ ಓಡಿ ಬಂದರು
ದುಂಬಿಯನ್ನು ಕಂಡ ಅವರು
ಹಿಡಿಯಲ್ಲೆಂದು ಹೋದರು

ಅವರ ಕಂಡ ದುಂಬಿಯು
ಹಾರಿಕೊಂಡು ಹೋಯಿತು

ದುಂಬಿಯೊಂದು ಬೇಕು ಎಂದು
ಮಕ್ಕಳೆಲ್ಲ ಅತ್ತರು
ಮಗುವ ಅಳುವ ಕಂಡ ಅಮ್ಮ
ಹೆದರಿ ಓಡಿ ಬಂದರು
ದುಂಬಿ ಬೇಕು ಎಂದ ಮಗುವು
ಹಠವ ಹಿಡಿದು ಅತ್ತಿತ್ತು
ಮಗುವ ಹಠವ ಕಂಡ ಅಮ್ಮ
ದುಂಬಿ ತರುವೆ ಎಂದರು
ದುಂಬಿ ತರುವರೆಂಬ ಆಸೆಯಿಂದ
ಮಗುವು ನಕ್ಕಿತು
ದುಂಬಿಯನ್ನು ತಂದ ಅಮ್ಮ
ಮಗುವಿಗೆಂದು ಕೊಟ್ಟರು
ದುಂಬಿಯನ್ನು ತೆಗೆದು ಕೊಂಡು
ಮಗುವು ಮುತ್ತ ಕೊಟ್ಟಿತು

.................................................................................................

## ವಿದ್ಯಾಲಯ ಪ್ರತಿಭೆಗಳತ್ತ

ವಿದ್ಯಾಲಯವು ಪ್ರತಿಭೆಗಳತ್ತ ಕಾರ್ಯಕ್ರಮದಂಗವಾಗಿ ಜಿ. ಎಚ್.ಎಸ್.ಎಸ್ ಪೈವಳಿಕೆ (ಕಾಯರ್ಕಟ್ಟೆ)ಯ ವಿದ್ಯಾರ್ಥಿಗಳು ಬಾಯಿಕಟ್ಟೆಯ ರಾಧಾಕೃಷ್ಣ ಆಚಾರ್ಯರ ಮನೆಯನ್ನು ಸಂದರ್ಶಿಸಿದರು. ವೃತ್ತಿಯಲ್ಲಿ ಟೈಲರ್ ಆಗಿರುವ ಶ್ರೀಯುತರು ಪ್ರವೃತ್ತಿಯಲ್ಲಿ ಸಿನಿಮಾ ನಟರೂ, ನಾಟಕರಂಗ ನಟರೂ ಆಗಿರುವರು. ಮಡದಿ ಮತ್ತು ಇಬ್ಬರು ಪುತ್ರಿಯರಿರುವ ತುಂಬು ಸಂಸಾರ.  ಹಿರಿಯ  ಪ್ರಾಥಮಿಕ ಶಾಲೆ ಕಾಸರಗೋಡಿನಲ್ಲಿ ಪ್ರಧಾನ ಪಾತ್ರವೊಂದರಲ್ಲಿ ಮಿಂಚಿದ ಇವರು ಸಿನಿಮಾದ ಆಶಯದಂತೆಯೇ ಇಬ್ಬರು ಪುತ್ರಿಯರ ನ್ನೂ ಕನ್ನಡ ಶಾಲೆಯಲ್ಲಿಯೇ ಕಲಿಸುತ್ತಿದ್ದಾರೆ. ನೇಮದ ಬೂಲ್ಯ ಇವರ ಮೊದಲ ಸಿನಿಮಾ. ತಂದೆಯ ಯಕ್ಷಗಾನ ಇವರಿಗೇನೋ ಕೈಗೆಟಕಲಿಲ್ಲ. ಬಡತನ ಇವರ ನಾಟಕದ ಹುಚ್ಚಿಗೆ ತಡೆಯಾಗಲಿಲ್ಲ.



ಕುಂಬಳೆಯ ಹರಿಕತೆಯ ಹರಿಕಾರ ಶಂನಾಡಿಗರನ್ನು ನಾಟಕದಲ್ಲಿ ಇವರು ಗುರುಸ್ಥಾನದಲ್ಲಿ ನೆನಪಿಸುತ್ತಾರೆ. ತಾಂತ್ರಿಕತೆಯಿಲ್ಲದ ಕಾಲದಲ್ಲಿ ನಾಟಕದ ಕಥಾಪಾತ್ರವನ್ನು ಪುಸ್ತಕದಲ್ಲಿ ಬರೆದು ಅಭಿನಯಕ್ಕೆ ಸಾಥ್ ನೀಡಿದ ಮಡದಿಯನ್ನು ಇವರು ಪ್ರೀತಿಯಿಂದಲೇ ನೆನಪಿಸುವರು. ನಾಟಕವು ಪೌರಾಣಿಕ ಕಥಾನಕದಿಂದ ಸಾಮಾಜಿಕ ಆಶಯಕ್ಕೆ ತನ್ನ



ಪಥವನ್ನು ಬದಲಿಸಿದಾಗ ನೈಜವಾದ ಸಂದೇಶವನ್ನು ನೀಡುವಲ್ಲಿ ವಿಫಲವಾದ ಬಗ್ಗೆ ಇವರಿಗೆ ಖೇದವಿದೆ. ಸಾವಿರಕ್ಕಿಂತಲೂ ಹೆಚ್ಚು ನಾಟಕ ಪ್ರದರ್ಶನದಲ್ಲಿ ಮಿಂಚಿದ ಅನುಭವ ಇವರದು. ಶಾಲಾಮಟ್ಟದಲ್ಲಿ ಅಭಿನಯ ಕಮ್ಮಟಗಳು ನಡೆಯಬೇಕು.

ಹೊಸ ನಾಟಕರಂಗದ ಆಸಕ್ತಿಯಿರುವ ಯುವಜನಾಂಗವು ಸೃಷ್ಟಿಯಾಗಬೇಕು. ಅದಕ್ಕೆ ವಿದ್ಯಾಲಯವು ವೇದಿಕೆಯಾಗಬೇಕೆಂಬ ನಿರೀಕ್ಷೆ ಇವರದು. 20 ರಷ್ಟು ವಿದ್ಯಾರ್ಥಿಗಳು ತರಗತಿ ಮೊಟಕಾಗದೆ ಶ್ರೀಯುತರೊಂದಿಗೆ ಸಂವಹನ ನಡೆಸಿದರು. ಇವರ ಜೀವನ ಕಥೆಯನ್ನು ಆಸಕ್ತಿಯಿಂದ ಆಲಿಸಿದರು. ಅಧ್ಯಾಪಕರು ಇವರಿಗೆ ಮಾರ್ಗದರ್ಶನವನ್ನು ನೀಡಿದರು. ಮಾಹಿತಿಯ ರಸಭೋಜನವನ್ನೇ ಮಕ್ಕಳು ಸವಿದರೂ, ಲಘು ಉಪಹಾರವನ್ನು ಮಕ್ಕಳಿಗೆ ಪ್ರೀತಿಯಿಂದ ನೀಡಲು ಇವರು ಮರೆಯಲಿಲ್ಲ.

..........................................................................................







UP HighTech ತರಗತಿ ಕೋಣೆಯ ಉದ್ಘಾಟನೆಯ ಸಂದರ್ಭ

.................................................................................






ಆಟಿಕಳಂಜನ ಪುರಪ್ರವೇಶ......

# ಉಪಸಂಹಾರ

ಪ್ರಸ್ತುತ ಜಗತ್ತು ಡಿಜಿಟಲ್ ರಂಗದ ಕಡೆಗೆ ಹೆಜ್ಜೆ ಹಾಕಿ, ವಿಶಾಲ ಸಾಮಾಜಿಕ ಔದ್ಯೋಗಿಕ ವೇದಿಕೆಯನ್ನು ತಾಂತ್ರಿಕ ಜಗತ್ತು ನಿರ್ಮಿಸಿರುವುದನ್ನು ಅಭಿನಂದಿಸಲೇ ಬೇಕು. ಆದರೆ ಇದೇ ತಂತ್ರಜ್ಞಾನವು ಮಾನವನಲ್ಲಿರಬೇಕಾದ ಮಾನವೀಯತೆಯನ್ನು ಹೊಸಕಿ ಹಾಕುವ ಸಂದರ್ಭಗಳೂ ಧಾರಾಳವಾಗಿವೆ. ಆದ್ದರಿಂದಲೇ ತಂತ್ರಜ್ಞಾನದ ಋಣಾತ್ಮಕ ದಿಶೆಯೆಡೆಗೂ ಕಣ್ಣನ್ನು ಕಿವಿಯಾಗಿಸಬೇಕಾದ ಅತ್ಯಗತ್ಯ ಸಂವೇದನೆಯನ್ನೂ ವಿದ್ಯಾರ್ಥಿ ಸಮುದಾಯದಲ್ಲಿ ಹುಟ್ಟುಹಾಕಬೇಕಾಗಿದೆ. ಇದು ಲಿಟಿಲ್ ಕೈಟ್ ನ ಮೂಲಕ ಸಾಧ್ಯವಾಗಬಹುದು. ಸಾಮಾಜಿಕ ಸಂದೇಶವನ್ನು, ಸಾಮಾಜಿಕ ಸಂವೇದನೆಯನ್ನು ಸಮಾಜಕ್ಕೆಸಮರ್ಥವಾಗಿ ತಲುಪಿಸಲು ಶಿಕ್ಷಣವಲ್ಲದೆ ಬೇರೆ ಯಾವ ಆಯುಧಗಳಿವೆ.. ? ಅದು ಲಿಟಲ್ ಕೈಟ್ಸ್ ಗೆ ಸಾಧ್ಯವಾಗಲಿ.ಅದಕ್ಕಿರುವ ಪುಟ್ಟ ಹೆಜ್ಜೆ ಈ ಡಿಜಿಟಲ್ ಮ್ಯಾಗಸಿನ್ ಆಗಿರಲಿ........







# THANKS

# TO

# ALL